ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೯ ಮೇ-೨೦೦೯ ಸಂಚಿಕೆ-೧೦



ರಾಜಕಾರಣದ ಅಧೋಗತಿ

ಅಗತ್ಯ ಕ್ಷಿಪ್ರ ಸಂಪೂರ್ಣ ಕ್ರಾಂತಿ

ಜನಪದ ವಿಚಾರದಲ್ಲಿ

ಮೇ–2009

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮೇ - ೨೦೦೯
ಸಂಪುಟ - ೯
ಸಂಚಿಕೆ - ೧೦

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com

web: janapada.net

ಸೂಸಲ ನಗೆಯ ಸೂಕ್ತಿಗಳು

ಕೂಸು ಕುಂಚಿಗೆ ತಿಂತ್ಯು । ಹಾಸೀಗಿ ನೆಲ ತಿಂತ್ಯು
ಅಜ್ಜಯ್ನ ಗಡ್ಡ ಇಲಿ ತಿಂತ್ಯು । ಅಡಗೂಳು
ಅಜ್ಜೀಯ ತಿಂತ್ಯು ಕಜ್ಜಾಯ ।

ಕಾಫಿ ಇಡ್ಡಲಿ ತಿಂತ್ಯು । ಕಪ್ಪ ಬಸಿಯನು ತಿಂತ್ಯು
ಉಪ್ಪಿಟ್ಟು ತಿಂತ್ಯು ಉಡುಪೀಯ । ಕೃಷ್ಣನ್ನ
ಕಡಗೋಲು ತಿಂತ್ಯು ಉಡುದಾರ ।

ಕಂಚು ಕನ್ನಡಿ ತಿಂತ್ಯು । ಹಂಚು ಮಾಳಿಗಿ ತಿಂತ್ಯು
ಬೆಂಚು ತಿಂದೀತು ಮೇಷ್ಟ್ರನ್ನ । ಉರೀನ
ಪಂಚರನೆ ತಿಂತ್ಯು ಲಂಚವು ।

ಕರವು ಎಮ್ಮಿಯ ತಿಂತ್ಯು । ಮರವು ತೋಪನೆ ತಿಂತ್ಯು
ಕೆರವ ತಿಂದಿತ್ತು ಬೀಡಾಡಿ । ನಾಯಿಯು
ಮರೆವು ತಿಂದಿತ್ತು ಅರಿವನ್ನು ।

ಬೇಲಿ ಹೊಲವನು ತಿಂತ್ಯು । ಸಾಲಿ ಹುಡುಗರ ತಿಂತ್ಯು
ಕೆಲಸವ ತಿಂತ್ಯು ಕಚೇರಿ । ಇಟ್ಟಲ್ಲೆ
ಟ್ರಝುರಿಯೆ ತಿಂತ್ಯು ಬ್ಯಾಂಕನ್ನು ।

ಗೋಮ ಎಂಜಲು ತಿಂತ್ಯು। ನಾಮ ಹಣೆಬರಾ ತಿಂತ್ಯು
ಸಿನೆಮಾ ತಿಂತ್ಯು ಸಂಗೀತ । ಕರ್ಮಠನ
ಯಾ ನೇಮ ತಿಂತ್ಯೋ ಗೊತ್ತಿಲ್ಲ ।

ನೇತ್ರ ನೋಟವ ತಿಂತ್ಯು । ಪಾತ್ರ ಆಟವ ತಿಂತ್ಯು
ಚಿತ್ರವ ತಿಂತ್ಯು ಮಸಿಯೆಲ್ಲ । ಬಿದ್ದಾಡಿ
ಚಿತ್ರಕನ ತಿಂತ್ಯು ಹುಸಿ ಹೆಸರು ।

ಸೋಗು ತಿಂದಿತು ಕವಿಯ । ಭೋಗ ತಿಂದಿತು
ಭವಿಯ
ಮೇಘ ತಿಂದಿತ್ತು ರವಿಕಿರಣ । ಕ್ಷಣ ಕ್ಷಣಕೆ
ರಾಗ ತಿಂದಿತ್ತು ಪದಗಳ್ನ ।

- ದ.ರಾ.ಬೇಂದ್ರೆ

ವಿಚಾರ ದೀಪ್ತಿ

ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರಗಳು ರಾಜೀವ್ ಗಾಂಧಿ ಹೆಸರುಗಳನ್ನು ೪೫೦ಕ್ಕೂ ಹೆಚ್ಚು ಸರ್ಕಾರಿ ಕಾರ್ಯಕ್ರಮಗಳಿಗೆ, ಯೋಜನೆಗಳಿಗೆ, ಸಂಸ್ಥೆಗಳಿಗೆ, ಸರ್ಕಾರ ಯಾವುದೇ ಹೊಸ ಯೋಜನೆ ಜಾರಿಗೆ ತರಲಿ, ಹೊಸ ಸೇತುವೆ ಕಟ್ಟಲಿ, ಆಸ್ಪತ್ರೆಗೆ ಶಂಕುಸ್ಥಾಪನೆ ನೆರವೇರಿಸಲಿ ಅದಕ್ಕೆ ಜವಾಹರಲಾಲ್ ನೆಹರು, ಇಂದಿರಾ ಗಾಂಧಿ ಅಥವಾ ರಾಜೀವ್ ಗಾಂಧಿಯವರ ಪೈಕಿ ಒಬ್ಬರದಾದರೂ ಹೆಸರನ್ನು ಇಡಲೇಬೇಕು ಎಂಬುದನ್ನು ಸುಶಾಸನದಂತೆ ಜಾರಿಗೆ ತರುತ್ತಿದೆ !

ಎಲ್ಲವುಗಳಿಗೂ ಒಂದೇ ಕುಟುಂಬದ ಮೂವರ ಹೆಸರುಗಳನ್ನು ಮಾತ್ರ ಇಟ್ಟರೆ, ಬೇರೆಯವರ ಹೆಸರುಗಳನ್ನು ಇಡಲೇ ಕೂಡದೆಂದರೆ ಅದನ್ನು ಪ್ರಶ್ನಿಸಬೇಕಾಗುತ್ತದೆ. ಯಾಕೆಂದರೆ ಇವೆಲ್ಲ ಕಾಂಗ್ರೆಸ್ ಪಕ್ಷದ ಕಾರ್ಯಕ್ರಮಗಳಲ್ಲಿ ದೇಶದ ಪ್ರಜೆಗಳ ತೆರಿಗೆಯಿಂದ ಸಂಗ್ರಹಿಸಲಾದ ಲಕ್ಷಾಂತರ ಕೋಟಿ ಹಣವನ್ನು ಒಂದು ಮನೆತನದ ಕೆಲ ಸದಸ್ಯರ ಹೆಸರಿನಲ್ಲಿ ಖರ್ಚುಮಾಡುವುದು ಯಾವ ನ್ಯಾಯ? ಈ ದೇಶದಲ್ಲಿ ಈ ಮೂವರ ಹೊರತಾಗಿ ಬೇರ್ಯಾರೂ ನಾಯಕರೇ ಇಲ್ಲವಾ? ಸರ್ಕಾರವೆಂದರೆ ಒಂದು ಕುಟುಂಬದ ಆಸ್ತಿನಾ ?

ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಅಂತಾರಲ್ಲ ಹಾಗೆಯೇ ಕಾಂಗ್ರೆಸ್ ಆಡಳಿತದಲ್ಲಿರುವ ರಾಜ್ಯ ಸರ್ಕಾರಗಳೂ ಈ ವಿಷಯದಲ್ಲಿ ಜಿದ್ದಿಗೆ ಬಿದ್ದವರಂತೆ ನೆಹರು-ಇಂದಿರಾ-ರಾಜೀವ್ ಹಿಂದೆ ಬಿದ್ದಿವೆ. ಸರ್ಕಾರ ಗ್ರಾಮೀಣ ಪ್ರದೇಶಗಳಿಗೆ ಆಂಬ್ಯುಲೆನ್ಸ್ ನೀಡುವ ಯೋಜನೆ ಆರಂಭಿಸಿತು. ಅದಕ್ಕೆ 'ರಾಜೀವ್ ಆರೋಗ್ಯಶ್ರೀ' ಅಂತ ಹೆಸರು. ೬೫೦ ಆಂಬ್ಯುಲೆನ್ಸ್‌ಗಳ ಮೇಲೆ ರಾಜೀವ್ ಗಾಂಧಿ ಚಿತ್ರ. ಒಂದಕ್ಕೆ ೧೨ ಲಕ್ಷ ರೂ ನಂತೆ ತಿಂಗಳ ನಿರ್ವಹಣೆಗೆ ೧.೨೫ ಲಕ್ಷ ರೂ ಖರ್ಚುಮಾಡಿ ರಾಜೀವ್ ಗಾಂಧಿ ಚಿತ್ರ ಹಾಕಿ ಊರೂರು ತಿರುಗಿಸಿದರೆ ಇದು ಕಾಂಗ್ರೆಸೀಕರಣವಾಗುವುದಿಲ್ಲವಾ? ಸ್ಯಾಂಪಲ್ ನೋಡಿ, ರಾಜೀವ್ ಗಾಂಧಿ ಯೋಜನೆ (ಪುದುಚೇರಿ), ರಾಜೀವ್ ಗಾಂಧಿ ಸೇತುವೆ-ರಸ್ತೆ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (ಹರಿಯಾಣ), ರಾಜೀವ್ ಗಾಂಧಿ ಪ್ರವಾಸೋದ್ಯಮ ಅಭಿವೃದ್ಧಿ ಮಿಷನ್, ಇಂದಿರಾಗಾಂಧಿ ಪ್ರಿಯದರ್ಶಿನಿ ವಿವಾಹ ಶಾಗುನ್ ಯೋಜನೆ (ಹರಿಯಾಣ), ಇಂದಿರಾ ಗಾಂಧಿ ಭೂಹೀನ ಕೃಷಿ ಕಾರ್ಮಿಕರ ಯೋಜನೆ (ಮಹರಾಷ್ಟ್ರ), ಪ್ರಾಯಶಃ ಬಚ್ಚಲುಮನೆ, ಕಕ್ಕಸು, ಚರಂಡಿಗಳು ಮಾತ್ರ ಈ ತ್ರಿಮೂರ್ತಿಗಳ ನಾಮಧಾರಣದಿಂದ ಬಚಾವ್ ಆಗಿರುವ ಗುಮಾನಿಗಳಿವೆ ಅಂದು ಕೊಂಡರೆ ರಾಜಸ್ಥಾನ ಸರ್ಕಾರ ಅದನ್ನೂ ಬಿಟ್ಟಿಲ್ಲ. ಇಂದಿರಾ ಸಾರ್ವಜನಿಕ ಶೌಚ್ ಯೋಜನೆಯಲ್ಲಿ ಎಲ್ಲಡೆ ಬಚ್ಚಲು ಮನೆ ಕಟ್ಟಿಸಿ ಅದಕ್ಕೂ ಇಂದಿರಾಗಾಂಧಿ ಹೆಸರಿನ ಫಲಕ ತೂಗು ಹಾಕಿದೆ. ಸಾರ್ವಜನಿಕ ಮೂತ್ರಿಗಳಿಗೂ ತ್ರಿಮೂರ್ತಿಗಳ ಹೆಸರೇ ಬೇಕೆ ?

- ವಿಶ್ವೇಶ್ವರ ಭಟ್

ರಾಜಕಾರಣದ ಅಧೋಗತಿ
ಅಗತ್ಯ ಕ್ಷಿಪ್ರ ಸಂಪೂರ್ಣ ಕ್ರಾಂತಿ

– ಸುರೇಂದ್ರ ಕೌಲಗಿ

ಈಗ್ಗೆ ಮೂವತ್ತುನಾಲ್ಕು ವರ್ಷಗಳ ಹಿಂದೆ ೧೯೭೫ ಮಾರ್ಚ್ ೬ ರಂದು ಲೋಕನಾಯಕ ಜಯಪ್ರಕಾಶ್ ನಾರಾಯಣರು ರಾಷ್ಟ್ರಪತಿ ಭವನದ ಮುಂದೆ ವಿಶಾಲ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡುತ್ತಾ "ಜನತೆ ಬರುತ್ತಿದೆ, ಸಿಂಹಾಸನ ಖಾಲಿ ಮಾಡಿ" ಎಂಬ ಬಹು ಕ್ರಾಂತಿಕಾರಕ ಮಾತನ್ನು ಹೇಳಿದ್ದರು. ಈ ಮಾತು ದೇಶದ ಮೂಲೆ ಮೂಲೆಯಲ್ಲೂ ಪ್ರತಿಧ್ವನಿಸಿತು. ಲೋಕಸಭೆಯ ಅಂದಿನ ಸದಸ್ಯರ ಅಂತರ್ಯವನ್ನೆಲ್ಲ ಆವರಿಸಿನಿಂತು ಇತಿಹಾಸದ ಮಾರ್ಗವನ್ನೇ ಬದಲಿಸಿಬಿಟ್ಟಿತು. ಜಯಪ್ರಕಾಶರು ಅಂಥ ಕ್ರಾಂತಿಕಾರಿ ಮಾತುಗಳನ್ನಾಡಲು ದೇಶದಲ್ಲಿ ಇದ್ದ ಪರಿಸ್ಥಿತಿಯಾದರೂ ಎಂಥದಿತ್ತು?

೧. ದೇಶದ ಎಲ್ಲ ರಾಜ್ಯಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿತ್ತು;
೨. ಚುನಾವಣಾ ಪ್ರಕ್ರಿಯೆ ಹದಗೆಟ್ಟಿತ್ತು;
೩. "ಆಯಾ ರಾಂ, ಗಯಾ ರಾಂ" ರಾಜಕಾರಣ ಸರ್ವೆಸಾಮಾನ್ಯ ವಾಗಿತ್ತು;
೪. ನಿರುದ್ಯೋಗ, ಬಡತನ ತಾರಕಕ್ಕೇರಿದ್ದವು;
೫. ಪದಾರ್ಥಗಳ ಬೆಲೆ ಗಗನ ಮುಟ್ಟಿತ್ತು;
೬. ಶಿಕ್ಷಣ ವ್ಯವಸ್ಥೆ ಪೂರ್ತಿ ಹದಗೆಟ್ಟಿತ್ತು;
೭. ಜಾತಿವಾದ ಸಮಾಜ ವ್ಯವಸ್ಥೆಯಲ್ಲಿ ಹೆಣೆದುಕೊಂಡಿತ್ತು;
೮. ವಂಶಪಾರಂಪರ್ಯದ ರಾಜಕಾರಣ ಬೇರೂರಿತ್ತು;
೯. ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ ಕೇವಲ ಹೆಸರಿಗೆ ಮಾತ್ರ ಇದ್ದವು;
೧೦. ಚೀಣಾ ಟಿಬೆಟ್ಟನ್ನು ನುಂಗಿ ಭಾರತದ ಹೆಬ್ಬಾಗಿಲಿಗೇ ಬಂದು ನಿಂತಿತ್ತು.

ಈಗ ಹದಿನೈದನೇ ಲೋಕಸಭಾ ಚುನಾವಣಾ ಸಮಯದಲ್ಲಿರುವ ಪರಿಸ್ಥಿತಿಯಾದರೂ ೧೯೭೫ರಲ್ಲಿದ್ದ ಪರಿಸ್ಥಿತಿಗೆ ಯಾವ ರೀತಿ ಭಿನ್ನವಾಗಿದೆ?

ಅದೇ ಭ್ರಷ್ಟತೆ, ಅದೇ ನಿರುದ್ಯೋಗ, ಅದೇ ಬೆಲೆಗಳ ಏರಿಕೆ ಇವೆ. ಹಾಗೆ ನೋಡಿದರೆ ೧೯೭೫ರಲ್ಲಿದ್ದ ಆ ಸಮಸ್ಯೆಗಳು ೨೦೦೯ರಲ್ಲಿ ಎರಡರಷ್ಟು ಪ್ರಮಾಣದಲ್ಲಿ ತೀವ್ರಗೊಂಡಿವೆ. ಹದಿನೈದನೇ ಲೋಕಸಭೆ ಕೋಟ್ಯಾಧೀಶ್ವರರ ಕೂಟವಾಗಲಿದೆ. ಕೋಟ್ಯಾಧೀಶರಿಗೆ ಜನತೆಯ ಯಾವ ಸಮಸ್ಯೆ ತಾನೆ ಅರ್ಥವಾದೀತು. ಗಾಂಧೀಜಿ ೧೯೦೯ರಲ್ಲಿ ಇಂದಿಗೆ ನೂರು ವರ್ಷಗಳ ಹಿಂದೆ ಪಾರ್ಲಿಮೆಂಟ್ ಎಂಬುದು ಕೇವಲ ಮಾತಿನಂಗಡಿ ಎಂದು ಹೇಳಿದ್ದು ನೂರಕ್ಕೆ ನೂರರಷ್ಟು ನಿಜವಾಗಲಿದೆ. ಭ್ರಷ್ಟತನದಿಂದಲೇ ಆಯ್ಕೆಗೊಳ್ಳುವ ಜನತಾ ಪ್ರತಿನಿಧಿಗಳು ಹೇಗೆ ತಾನೆ ಭ್ರಷ್ಟತೆಯನ್ನು ಕೊನೆಗಾಣಿಸಬಲ್ಲರು? ಭ್ರಷ್ಟತೆಯನ್ನು ಕೊನೆಗಾಣಿಸುವುದೆಂದರೆ ಅವರ ಪಾಲಿಗೆ

ರಾಜಕೀಯ ಜೀವನದ ಅಂತ್ಯವೇ ಆಗುತ್ತದೆ. ಆದ್ದರಿಂದ ಭ್ರಷ್ಟರಿಂದ ಭ್ರಷ್ಟಾಚಾರದ ನಿರ್ಮೂಲನ ಅಸಾಧ್ಯ. ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವ ಹೊಣೆಗಾರಿಕೆಯನ್ನಾಗಲೀ, ಪ್ರಜಾ ಪ್ರಭುತ್ವವನ್ನು ಆರೋಗ್ಯಪೂರ್ಣವಾಗಿ ಬೆಳೆಸಿಕೊಂಡು ಬರುವ ಹಿರಿತನವನ್ನಾಗಲೀ ಹದಿನೈದನೇ ಲೋಕಸಭೆಗೆ ಒಪ್ಪಿಸುವುದು ದುರಂತಕ್ಕೆ ಕಾರಣವಾಗುತ್ತದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಯಾವ ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ಮಹಾತ್ಮಾ ಗಾಂಧೀಜಿಯವರು ಹೋರಾಡಿದರೋ, ಯಾವ ಸ್ವಾತಂತ್ರ್ಯ ಅಥವಾ ಪ್ರಜಾಪ್ರಭುತ್ವ ತಮ್ಮ ಜನ್ಮ ಸಿದ್ಧ ಹಕ್ಕು ಎಂದು ಹೇಳಿ ಲೋಕಮಾನ್ಯ ಟಿಳಕರು ಅನೇಕ ವರ್ಷಗಳ ಕಾಲ ಜೈಲುವಾಸ ಅನುಭವಿಸಿದರೋ, ಯಾವ ಪ್ರಜಾಪ್ರಭುತ್ವ ಅಥವಾ ಗಣರಾಜ್ಯದ ಸ್ಥಾಪನೆಗಾಗಿ ಡಾ.ಅಂಬೇಡ್ಕರರು ತಮ್ಮ ಕಷ್ಟಕಾರ್ಪಣ್ಯಗಳ ವಿಷಾದ ಲೇಖನಿಯಿಂದ ಸಂವಿಧಾನ ಬರೆದರೊ, ಯಾವ ಪ್ರಜಾಪ್ರಭುತ್ವದ ಪುನರ್‌ಸ್ಥಾಪನೆಗಾಗಿ ಜಯಪ್ರಕಾಶ ನಾರಾಯಣರು ತಮ್ಮ ೭೩ನೇ ಇಳಿ ವಯಸ್ಸಿನಲ್ಲಿ ಮತ್ತು ಅನಾರೋಗ್ಯ ಸ್ಥಿತಿಯಲ್ಲಿ ಏಳು ತಿಂಗಳ ಕಾಲ ಕಾರಾಗೃಹದ ಏಕಾಂತವಾಸ ಅನುಭವಿಸಿದರೋ ಅಂಥ ಅಮೂಲ್ಯ ಬೆಲೆಯ ಪ್ರಜಾಪ್ರಭುತ್ರವನ್ನು ನೂತನ ಲೋಕಸಭೆಗೆ ಒಪ್ಪಿಸಬೇಕೇ ಅಥವಾ ಪರ್ಯಾಯ ಮಾರ್ಗವನ್ನು ಹಿಡಿಯಬೇಕೇ ಎಂಬುದನ್ನು ದೇಶದ ಪ್ರಜೆಗಳು ಮತ್ತು ಮತದಾರರು ಗಂಭೀರ ಪೂರ್ವಕವಾಗಿ ವಿಚಾರ ಮಾಡಬೇಕಿದೆ. ಸ್ವತಂತ್ರ ಭಾರತದ ಒಂದೊಂದು ಲೋಕಸಭೆಯೂ ತನ್ನ ಗುಣಮಟ್ಟವನ್ನು ಕಾಪಾಡಿಕೊಂಡು ಬರುವಲ್ಲಿ ವಿಫಲವಾಗಿದೆಯೆಂಬುದು ದಿನದ ಬೆಳಕಿನಷ್ಟೆ ನಿಚ್ಚಳವಾಗಿದೆ. ಮುಂದಿನ ವರ್ಷಗಳಲ್ಲಿ ರಚಿತವಾಗುವ ಲೋಕಸಭೆ ಹೆಚ್ಚು ಪರಿಶುದ್ಧವೂ, ಹೆಚ್ಚು ವಿವೇಕಶಾಲಿಗಳಿಂದ ಕೂಡಿದುದೂ, ಸ್ಥಿರ ಸರ್ಕಾರಕ್ಕೆ ಹೆಚ್ಚು ಮಹತ್ವವನ್ನು ಕೊಡುವಂಥದೂ ಆದ ಲೋಕಸಭೆಯ ರಚನೆಯಾಗಬೇಕೆಂದರೆ ಪ್ರಜೆಗಳು, ಮುಖ್ಯವಾಗಿ ಯುವ ಮತದಾರರು ಪ್ರಜಾಪ್ರಭುತ್ವದ ಬಗ್ಗೆ ಇರುವ ತಮ್ಮ ಉತ್ತರದಾಯಿತ್ವದ ಬಗ್ಗೆ ಆಲೋಚನೆ ಮಾಡುತ್ತಾ ಕ್ರಿಯಾಶೀಲರಾಗಬೇಕು. ದೇಶಕ್ಕೆ ಗಂಡಾಂತರ ಬಂದಾಗಲೆಲ್ಲ ರಾಷ್ಟ್ರನಾಯಕರು ಯುವಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಕರೆಕೊಟ್ಟಿದ್ದಾರೆ. ಕ್ರಾಂತಿಯ ಅಥವಾ ಬದಲಾವಣೆಯ ಹರಿಕಾರರಾಗಲು ಮುಂದೆ ಬರಲು ಅವರಿಗೆ ಆಹ್ವಾನಿಸಿದ್ದಾರೆ. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಗಾಂಧೀಜಿ ಯುವಕರಿಗೆ ತಮ್ಮ ಮನೆಮಠ ತೊರೆದು ಬರಲು ಕರೆ ನೀಡಿದ್ದರು, ಯುವಕರಿಗೆ ತಮ್ಮ ಶಾಲಾ ಕಾಲೇಜುಗಳನ್ನು ತೊರೆದು ಬರಲು ಕರೆನೀಡಿದ್ದರು. ಹಾಗೆ ಬರುವ ಯುವಕರು ಹಳ್ಳಿಗಳಿಗೆ ಹೋಗಿ ದೇಶ ನಿರ್ಮಾಣಕ್ಕೆ ಸಂಬಂಧಿಸಿದ ಹದಿನೆಂಟು ಬಗೆಯ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಲು ಸೂಚಿಸಿದ್ದರು. ಜಯಪ್ರಕಾಶ ನಾರಾಯಣ-ರು ಕಾರಾಗೃಹಕ್ಕೆ ಹೋದ ದಿನದಿಂದ ದಿನಚರಿಯನ್ನು ಬರೆಯಲು ಪ್ರಾರಂಭಿಸಿದ್ದರು. ಅವರು ತಮ್ಮ ದಿನಚರಿಯ ಮೊದಲ ದಿನ: ಜುಲೈ ೨೧, ೧೯೭೫ ರಂದು ಹೀಗೆ ಬರೆದಿದ್ದಾರೆ, "ಮುಂದಿನ ಚುನಾವಣೆಗಳವರೆಗೆ ಬಾಯಿಮುಚ್ಚಿ ಕೂಡುವುದೇ? ಅಷ್ಟರಲ್ಲೇ ಪರಿಸ್ಥಿತಿ ಅಸಹನೀಯವಾದರೆ ಜನತೆ ಏನು ಮಾಡಬೇಕು? ಕೈಕಟ್ಟಿಕೊಂಡು ಕೂತು ಮಾತಿಲ್ಲದೆ ಸಂಕಟವನ್ನೆಲ್ಲ ಸಹಿಸುವುದೆ? ಬಹುಷಃ ಇದನ್ನೇ ಆಡಳಿತಾರೂಢ ಪಕ್ಷ, ಪ್ರಜಾಪ್ರಭುತ್ವವೆಂದು ಕರೆದೀತು. ಸ್ಮಶಾನ ಶಾಂತಿಯೇ ಅದರ ಚಿತ್ರವಾದೀತು. ಒಂದುವೇಳೆ ಚುನಾವಣೆಗಳಲ್ಲಿ ದಬ್ಬಾಳಿಕೆ, ಅನ್ಯಾಯಗಳು ನಡೆಯುತ್ತಿದ್ದರೆ ಅದಕ್ಕೆ

ಏನು ಉತ್ತರ? ಆದ್ದರಿಂದಲೇ ಜನತೆ ಜಾಗ್ರತವಾಗಬೇಕು, ಎದ್ದು ನಿಲ್ಲಬೇಕು, ಸಂಘಟಿತರಾಗಬೇಕು. ಯಾವುದೇ ಪ್ರಜಾಪ್ರಭುತ್ವದಲ್ಲಾಗಲಿ ತನ್ನ ಸಂಕಟ ಪರಿಹಾರಕ್ಕೆ ಜನತೆ ಒಂದೇ ಒಂದು ಮಾರ್ಗವನ್ನು ನಂಬಿ ಕುಳಿತುಕೊಳ್ಳುವುದಿಲ್ಲ".

ದೇಶದ ಇಂದಿನ ಹಲವು ಬಗೆಯ ಸಮಸ್ಯೆಗಳ ಪರಿಹಾರಕ್ಕೆ ಏನು ಉಪಾಯಗಳೆಂಬುದು ಯಾರಿಗೂ ಗೊತ್ತಾಗುತ್ತಿಲ್ಲ. ಪರಿಹಾರ ಕಂಡುಹಿಡಿಯುವಲ್ಲಿ ರಾಜಕಾರಣಿಗಳು ಮಾತ್ರವಲ್ಲ ಆರ್ಥಿಕ ತಜ್ಞರೂ, ಯೋಜನಾ ತಜ್ಞರೂ, ಶಿಕ್ಷಣವೇತ್ತರೂ, ವಿಜ್ಞಾನಿಗಳೂ, ತಂತ್ರಜ್ಞಾನಿಗಳೂ, ಬುದ್ಧಿಜೀವಿಗಳೂ ಸೇರಿದಂತೆ ಎಲ್ಲರೂ ವಿಫಲರಾಗಿದ್ದಾರೆ. ಇಂದಿನ ಸಮಸ್ಯೆಗಳು ಎಲ್ಲರಿಗೂ ಅಪರಿಹಾರಕವಾಗಿ ಕಾಣುತ್ತಿವೆಯಷ್ಟೇ ಅಲ್ಲ, ಅವುಗಳನ್ನು ಸುಮ್ಮನೆ ಸಹಿಸಿಕೊಂಡಿರಬೇಕಷ್ಟೇ ಎಂಬುವಷ್ಟರ ಮಟ್ಟಿಗೆ ಹತಾಶರಾಗಿದ್ದಾರೆ.

ಇಂಥ ನಿರಾಶಾಜನಕ ಸ್ಥಿತಿಯಲ್ಲಿ ನಮಗೆ ಸ್ಪಷ್ಟವಾಗಿ ಗೋಚರಿಸುವ ಶ್ರೇಷ್ಠ ಉಪಾಯ ಸಮಾಜ ವ್ಯವಸ್ಥೆಯಲ್ಲಿ ಸಂಪೂರ್ಣ ಕ್ರಾಂತಿಯನ್ನೇ ಮಾಡುವುದು. ಸಮಾಜ ಅಂಧಕಾರದಿಂದ ಬೆಳಕಿನತ್ತ ಸಾಗಬೇಕಾದರೆ ಕ್ರಾಂತಿ ಅನಿವಾರ್ಯ. ಕ್ರಾಂತಿ ಅಂದರೆ ಬದಲಾವಣೆ. ಅನಿವಾರ್ಯತೆಯಿಂದ ಹುಟ್ಟಿದ ಕ್ರಾಂತಿಗಳು ಜಾಗತಿಕ ಇತಿಹಾಸದ ಪುಟಗಳ ತುಂಬ ದಾಖಲುಗೊಂಡಿವೆ. ಅಂಥ ಕ್ರಾಂತಿಗಳಲ್ಲಿ ಕೆಲವು ಹಿಂಸಾ ಕ್ರಾಂತಿಗಳಾಗಿದ್ದರೆ, ಹಲವು ಅಹಿಂಸಾ ಕ್ರಾಂತಿಗಳು. ಕ್ರಾಂತಿಗಳ ಸ್ವಭಾವ ಯಾವುದೇ ಇರಲಿ, ಕ್ರಾಂತಿ ನಡೆದ ಕ್ಷೇತ್ರ ಯಾವುದೇ ಬಗೆಯದಾಗಿರಲಿ ಅವುಗಳ ಉದ್ದೇಶ್ಯ ಒಂದೇ. ಪ್ರಚಲಿತ ಕುಲಗೆಟ್ಟ ಪರಿಸ್ಥಿತಿಯನ್ನು ಪಲ್ಲಟಿಸಿ, ಅದರ ಸ್ಥಾನದಲ್ಲಿ ಕುಲಶೀಲ ಪರಿಸ್ಥಿತಿಯನ್ನು ನಿರ್ಮಿಸುವುದು. ಕ್ರಾಂತಿಯ ಕ್ಷೇತ್ರ ವಿಶಾಲವಾಗಿರಬೇಕೆಂದೇನೂ ಇಲ್ಲ. ವ್ಯಕ್ತಿಹಂತದಿಂದ ಹಿಡಿದು ಸಮಷ್ಟಿ ವಿಸ್ತಾರದ ಯಾವುದೇ ಹಂತದಲ್ಲಿ ಪರಿಸ್ಥಿತಿ ಕುಲಗೆಟ್ಟಿದ್ದರೆ, ಅಧೋಗತಿಗೆ ಇಳಿದಿದ್ದರೆ ಕ್ರಾಂತಿ ಅಗತ್ಯವಾಗುತ್ತದೆ ಮತ್ತು ಅದು ಬೇಡವೆಂದರೂ ಆಗಿಯೇ ತೀರುತ್ತದೆ. ಇದಕ್ಕೆ ಕಾರಣ ಪರಿಸ್ಥಿತಿಯ ಅನಿವಾರ್ಯತೆಯ ಒತ್ತಡ. ಅಲ್ಲದೆ, ಕ್ರಾಂತಿ ಉಪಯೋಗಕ್ಕೆ ಬಾರದ, ಸವಕಳಿಗೊಂಡ ಹಳೆ ವ್ಯವಸ್ಥೆಯಿಂದ ಬಿಡುಗಡೆಗೊಂಡು ಸೃಜನಾತ್ಮಕ, ಅಭಿವೃದ್ಧಿಶೀಲ, ಮಾನವೀಯಗುಣವರ್ಧನೆಯ ವ್ಯವಸ್ಥೆಯನ್ನು ಸೃಷ್ಟಿಸಬೇಕೆಂಬ ಹಸಿವನ್ನು ತನ್ನ ಒಡಲೊಳಗೆ ಇಟ್ಟುಕೊಂಡಿರುತ್ತದೆ. ಆದ್ದರಿಂದ ಕ್ರಾಂತಿ ಯಾರಿಂದಲೂ ನಿರ್ಮಾಣವಾಗುವುದಿಲ್ಲ, ಅದು ತಾನಾಗಿಯೇ ಸಂಭವಿಸಿಬಿಡುತ್ತದೆ. ಇಂಥ ಉದ್ದೇಶಿತ ಕ್ರಾಂತಿಗಳು, ರಷಿಯಾ, ಇಂಗ್ಲೆಂಡ್, ಫ್ರಾನ್ಸ್, ಅಮೇರಿಕಾ ಮುಂತಾದ ದೇಶಗಳಲ್ಲೂ ಮತ್ತು ನಮ್ಮ ಭಾರತದಲ್ಲೂ ಆಗಿವೆ. ಈಗ ಭಾರತದ ಮಟ್ಟಿಗಂತೂ ಕ್ಷಿಪ್ರ ಕ್ರಾಂತಿಯಾಗಬೇಕಾದ ಅವಶ್ಯಕತೆಯುಂಟಾಗಿದೆ. ಆ ಕ್ರಾಂತಿ ಚಿಕ್ಕ ಪ್ರಮಾಣದ ಕ್ರಾಂತಿಯಾಗಿರದೆ, ಸಂಪೂರ್ಣ ಪ್ರಮಾಣದ ಕ್ರಾಂತಿಯಾಗಬೇಕಿದೆ. ಗಾಂಧೀಜಿಯವರು ಕೂಡ ಭಾರತಕ್ಕೆ ಬೇಕಿರುವುದು ಕೇವಲ ಸ್ವರಾಜ್ಯವಲ್ಲ ಪೂರ್ಣ ಸ್ವರಾಜ್ಯವೆಂದು ಹೇಳಿದ್ದರು. ಗಾಂಧೀಜಿಯವರ ಪೂರ್ಣ ಸ್ವರಾಜ್ಯದ ಆ ಇಚ್ಛೆಯನ್ನು ಜೆ.ಪಿ.ಯವರ ಸಂಪೂರ್ಣ ಕ್ರಾಂತಿ ನೆರವೇರಿಸಬಲ್ಲುದಾಗಿದೆ.

ದೇಶದ ಪ್ರಜಾಪ್ರಭುತ್ವ ಸುಧಾರಣೆಗೊಳ್ಳಬೇಕಾದರೆ ಏಕಕಾಲಕ್ಕೆ ಶಿಕ್ಷಣ ಕ್ಷೇತ್ರ, ಆರ್ಥಿಕ ಕ್ಷೇತ್ರ, ರಾಜಕೀಯ ಕ್ಷೇತ್ರ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಜೀವನ ಮೌಲ್ಯಗಳೇ ಪ್ರಧಾನವಾಗಿರುವ ಚೈತನ್ಯ ತುಂಬ ಬೇಕು. ರಾಜಕೀಯ ಕ್ಷೇತ್ರದ ಪ್ರಭಾವ ಮತ್ತು

ಹಿಡಿತ ಜೀವನದ ಉಳಿದೆಲ್ಲ ಕ್ಷೇತ್ರಗಳ ಮೇಲೆ ಪರಿಣಾಮ ಬಿರುವುದರಿಂದ ಸಂಪೂರ್ಣಕ್ರಾಂತಿಯ ಆದ್ಯ ಗುರಿ ರಾಜಕಾರಣವೇ ಆಗಿರುತ್ತದೆ. ಇಂದು ಯಾವೆಲ್ಲ ದೋಷಗಳು ರಾಜಕೀಯ ಕ್ಷೇತ್ರದಲ್ಲಿ ನುಸುಳಿವೆಯೋ ಅವುಗಳ ನಿವಾರಣೆಗೆ ಅಗತ್ಯವಾದ ಸಂವಿಧಾನಾತ್ಮಕ ಕ್ರಮಗಳನ್ನು ಒಳಗೊಂಡಂತೆ ಮತದಾರರ ಶಿಕ್ಷಣವನ್ನು ಕೈಗೆತ್ತಿಕೊಳ್ಳುತ್ತದೆ, ರಾಜಕಾರಣವನ್ನು ಶುದ್ಧಿಕರಿಸುವ ಕ್ರಮಗಳ ಬಗ್ಗೆ ಈಗಾಗಲೇ ವಿಪುಲ ಚಿಂತನೆ ನಡೆದಿದೆ, ಸಲಹೆಗಳ ರಾಶಿಯೇ ಬಿದ್ದಿದೆ. ಅವುಗಳ ಜಾರಿಗೆ ಬರುವಂತೆ ನೂತನವಾಗಿ ಮತದಾನದ ಹಕ್ಕು ಪಡೆದಿರುವ ಯುವಕರನ್ನೊಳಗೊಂಡಂತೆ ಸಮಸ್ತ ಯುವ ಸಮುದಾಯ ಈ ಕೆಲಸದಲ್ಲಿ ತೊಡಗಬೇಕು. ರಾಜಕಾರಣವನ್ನು ಶುದ್ಧೀಕರಣಗೊಳಿಸುವ ಕ್ರಿಯೆಗೆ ಮಹಾತ್ಮಾ ಗಾಂಧೀ, ವಿನೋಬಾ, ಜೆ.ಪಿ, ಅಂಬೇಡ್ಕರ್ ಮುಂತಾದ ಇನ್ನೂ ಅನೇಕ ರಾಜಕೀಯ ಚಿಂತಕರ, ಕ್ರಿಯಾಶೀಲರ ವಿಚಾರಗಳು ನಮಗೆ ಮಾರ್ಗದರ್ಶಕವಾಗಿ ದೊರೆಯುತ್ತವೆ. ಈಗಾಗಲೆ ಮಂಡ್ಯ ಜಿಲ್ಲೆಯಲ್ಲಿ ಪಕ್ಷಾತೀತ ಮತದಾರರ ಸಂಘಟನೆಯ ಅನುಭವ ಮತ್ತು ಸಂಪೂರ್ಣ ಕ್ರಾಂತಿ ಎಂಬ ವಿದ್ಯಾಲಯವನ್ನು ನಡೆಸಿದ ಅನುಭವ ನಮ್ಮ ಮುಂದೆ ಇದೆ.

ಸಂಪೂರ್ಣ ಕ್ರಾಂತಿಯ ಇನ್ನೊಂದು ಪ್ರಮುಖ ಗುರಿ ಗ್ರಾಮರಾಜ್ಯ ಸ್ಥಾಪಿಸುವುದು. ಇಂದಿನ ಸರ್ಕಾರಗಳ ನೀತಿಯ ಕಾರಣದಿಂದಾಗಿ ದೇಶದ ಬೆನ್ನೆಲುಬಾಗಿದ್ದ ಗ್ರಾಮಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವುದರಿಂದಲೇ ದೇಶ ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ದಿವಾಳಿ ಎದ್ದಿದೆ. ದೇಶ ಸುಭದ್ರವೂ, ಕಲ್ಯಾಣಕಾರಿ ದೇಶವೂ ಆಗಬೇಕಿದ್ದರೆ ದೇಶದ ಮೂಲ ಸತ್ವವಾದ ಗ್ರಾಮಗಳ ಪುನಾರಚನೆ ಶೀಘ್ರವಾಗಿ ಆಗಬೇಕಿದೆ. ಗಾಂಧೀಯಾದಿಯಾಗಿ ಎಲ್ಲ ಮುಖಂಡರು, ಆರ್ಥಿಕ ಚಿಂತಕರು, ಪರಿಸರದ ಬಗ್ಗೆ ಕಾಳಜಿಯುಳ್ಳವರು ದೇಶದ ಏಳಿಗೆ ಗ್ರಾಮಗಳ ಪುನರುಜ್ಜೀವನದಲ್ಲಿಯೇ ಇದೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಆದ್ದರಿಂದ ಗ್ರಾಮಗಳ ಹಿನ್ನೆಲೆಯುಳ್ಳ ಎಲ್ಲರೂ ಗ್ರಾಮಜೀವನದ ಚಳುವಳಿಯನ್ನು ಬಲಪಡಿಸಬೇಕು. ಕೇಂದ್ರ ಸರ್ಕಾರ ಕೈಗೊಂಡಿರುವ ನಗರಾಭಿವೃದ್ಧಿ ಯೋಜನೆಗಳನ್ನು ಸ್ಥಗಿತಗೊಳಿಸುವ ಕೆಲಸ ಸಂಪೂರ್ಣಕ್ರಾಂತಿಯ ಉದ್ದೇಶ್ಯವಾಗುತ್ತದೆ.

ಶಿಕ್ಷಣ ಕ್ಷೇತ್ರವಂತೂ ಗೊಂದಲದ ಗೂಡಾಗಿದೆ; ವಾಣಿಜ್ಯಕರಣಗೊಂಡಿದೆ; ಶಿಕ್ಷಣ ಪಡೆದವರೆಲ್ಲರೂ ಸಮಾಜ ಹಿತ ವಿಮುಖರಾಗುತ್ತಿದ್ದಾರೆ. ಶಿಕ್ಷಣವನ್ನು ಜೀವನ್ಮುಖಿ, ಸಮಾಜ ಹಿತನ್ಮುಖಿ ಮಾಡುವ ಬಗ್ಗೆ ಸಲಹೆಗಳ ರಾಶಿಯೇ ಬಿದ್ದಿದೆ. ತಪ್ಪು ಶಿಕ್ಷಣ ನೀತಿಯಿಂದ ದಾರಿ ತಪ್ಪುತ್ತಿರುವ, ನಿರುದ್ಯೋಗದಂಥ ಸಮಸ್ಯೆಗೆ ತುತ್ತಾಗುತ್ತಿರುವ ಯುವಕರೇ ಸಂಪೂರ್ಣ ಕ್ರಾಂತಿಯ ಸೈನಿಕರಾಗಬೇಕಿದೆ.

ದೇಶದ ಇಡೀ ಸಮಾಜದ ಕಾಯಕಲ್ಪವನ್ನೇ ಮಾಡಬೇಕಾಗಿರುವ ಈ ಸಂದರ್ಭದಲ್ಲಿ ಗಾಂಧೀ ವಿಚಾರ ಪ್ರೇರಿತ–ಜೆ.ಪಿ.ಯವರ ಜೀವನದಾನದ–ವಿನೋಬಾರ ಅಖಂಡ ತಪಸ್ಸಿನ ಸಂಪೂರ್ಣ ಕ್ರಾಂತಿಯೊಂದೇ ರಾಮಬಾಣವಾಗಲಿದೆ. ನಮ್ಮ ದೇಶದ ಯುವಕರು ಮತ್ತು ವಿದ್ಯಾರ್ಥಿಗಳು ಸ್ವಾತಂತ್ರ್ಯೋತ್ತರ ಭಾರತದ ನವನಿರ್ಮಾಣದ ಆಹ್ವಾನವನ್ನು ಸ್ವೀಕರಿಸಬೇಕು. ಸಂಪೂರ್ಣ ಕ್ರಾಂತಿಯನ್ನು ನಡೆಸಬೇಕು.

* * *

ನೆರೆ ನಿಯಂತ್ರಣ ಅಧಿಕಾರಶಾಹಿಯ ಒಂದು ಕಾರ್ಯವೈಖರಿ

– ನರೇಂದ್ರ ಕೋಹಲಿ

ನಾನು ನೆರೆ ನಿಯಂತ್ರಣ ಆಫೀಸಿಗೆ ಫೋನ್ ಮಾಡಿದೆ. ಅಲ್ಲಿದ್ದವನಾರೋ ರಿಸೀವರ್ ಕೈಗೆತ್ತಿಕೊಂಡು, "ಏನು ಬೇಕು ಹೇಳಿ?" ಅಂದ.

"ಯಮುನಾ ನದಿಗೆ ಪ್ರವಾಹ ಬಂದಿದೆ," ನಾನು ಹೇಳಿದೆ.

"ಗೊತ್ತಿದೆ. ಹಾಗೆಂದು ಮುಂಜಾನೆ ಪೇಪರಿನಲ್ಲಿ ಓದಿದ್ದೇವೆ."

"ನೀರ ನಡುವೆ ನಿಂತ ಮರದ ಟೊಂಗೆಗೆ ಇಬ್ಬರು ಜೋತುಬಿದ್ದು ಚೀರುತ್ತಿದ್ದಾರೆ."

"ಚೀರುವಂಥಾದ್ದೇನು ಆಯಿತು? ಎವರೆಸ್ಟ್ ಶಿಖರದ ಮೇಲೇರಿದ್ದಾರೇನು?"

"ಅಲ್ಲರೀ. ಅವರು ಪ್ರವಾಹದಲ್ಲಿ ಸಿಕ್ಕುಬಿದ್ದಿದ್ದಾರೆ. ಸಹಾಯಕ್ಕಾಗಿ ಚೀರುತ್ತಿದ್ದಾರೆ."

"ಅಚ್ಛಾ. ಕೂಡಲೆ ನಾವು ಏನಾದರೊಂದು ವ್ಯವಸ್ಥೆ ಮಾಡುತ್ತೇವೆ," ಅಂದವನೇ ಆತ ರಿಸೀವರ್ ಕೆಲಗಿಟ್ಟ.

ಸ್ವಲ್ಪ ಹೊತ್ತಿನಲ್ಲೆ ಪೋಲೀಸರ ಫ್ಲೈಯಿಂಗ್ ಸ್ಕ್ವಾಡ್ ಬಂತು. ಪೋಲೀಸ್ ವ್ಯಾನ್ ನಿಲ್ಲುತ್ತಲೇ ಇಬ್ಬರು ಮೂವರು ಪೋಲೀಸರೂ ಒಬ್ಬ ಸಬ್ ಇನ್‌ಸ್ಪೆಕ್ಟರರೂ ಆಢ್ಯತೆಯಿಂದ ಕೆಳಗಿಳಿದರು.

"ಯಾರು ಅದು ಟೆಲಿಫೋನ್ ಮಾಡಿದ್ದು?" ಸಬ್ ಇನ್‌ಸ್ಪೆಕ್ಟರ್ ಜನಜಂಗುಳಿಯನ್ನು ನೋಡಿ ಒದರಿದ.

"ನಾನು ಮಾಡಿದ್ದೆ ಸಾಹೇಬರೇ. ಆದಷ್ಟು ಬೇಗ ಆ ಜನರನ್ನು ಮರದಿಂದ ಕೆಳಗಿಳಿಸಿಬಿಡಿ. ಇಲ್ಲವಾದರೆ ಅವರು ಮುಳುಗಿ ಹೋದಾರು. ಮೊದಲೇ ನೀರು ಏರುತ್ತಿದೆ," ನಾನು ಮುಂದೆ ಬಂದು ಹೇಳಿದೆ.

"ಎಷ್ಟು ಕೇಳುತ್ತೇವೋ ಅಷ್ಟಕ್ಕೇ ಉತ್ತರ ಕೊಡು. ಮಕ್ಕಳು ದೊಡ್ಡ ಬುದ್ಧಿವಂತರು ಅಂತ ತಿಳಕೊಂಡಿದ್ದಾರೆ. ನೀನೇ ಫೋನ್ ಮಾಡಿದ್ದೆಯಾ?" ಸಬ್ ಇನ್ಸ್‌ಪೆಕ್ಟರ್ ಗದರಿಸಿದ.

"ಹೌದು."

"ಸ್ವಂತ ಖುಷಿಯಿಂದ ಮಾಡಿದ್ದೆಯೋ ಅಥವಾ ಯಾವನಾದರೂ ಬೋ.... ಮಗ ಮಾಡಿಸಿದ್ದನೋ."

"ಸ್ವಂತ ಖುಷಿಯಿಂದ ಮಾಡಿದ್ದೆ."

"ಯಾರದಾದರೂ ಮನೆಯಿಂದ ಮಾಡಿದ್ದೆಯೋ ಅಥವಾ ಪಬ್ಲಿಕ್ ಬೂತ್‌ನಿಂದ ಮಾಡಿದ್ದೆಯೋ?"

"ಪಬ್ಲಿಕ್ ಬೂತ್‌ನಿಂದ ಮಾಡಿದ್ದೆ."

"ಅಚ್ಛಾ. ಆ ಮಕ್ಕಳು ಮರ ಹತ್ತಿದ್ದನ್ನು ನೀನು ಸ್ವತಃ ನೋಡಿದ್ದೀಯಾ ಅಥವಾ ಯಾವನಾದರೂ ದನ ಕಾಯುವವ ಹೇಳಿದನೋ?"

"ನಾನೇ ನೋಡಿದೆ."

"ಅವರು ಸ್ವಂತ ಖುಷಿಯಿಂದ ಮರ ಹತ್ತಿದರೋ ಅಥವಾ ಯಾರಾದರೂ ಅವರನ್ನು ಅಲ್ಲಿ ಏರಿಸಿದರೋ?" ಸಬ್ ಇನ್‌ಸ್ಪೆಕ್ಟರ್ ಕಣ್ಣು ಕೆಂಪಗೆ ಮಾಡಿ ಕೇಳಿದ.

"ನನಗೆ ಗೊತ್ತಿಲ್ಲ. ಅವರು ಹತ್ತುತ್ತಿದ್ದುದನ್ನು ನಾನು ನೋಡಿಲ್ಲ. ಅವರು ಮರದ ಮೇಲಿದ್ದುದನ್ನು ಮಾತ್ರ ನೋಡಿದ್ದೇನೆ."

"ಇರಲಿ. ನಿನಗೆ ಹೇಗನಿಸುತ್ತೆ?" ಸಬ್ ಇನ್‌ಸ್ಪೆಕ್ಟರ್ ಕಣ್ಣು ಕೆಂಪಗೆ ಮಾಡಿ ಕೇಳಿದ.

"ನೆರೆ ನೀರಿನಿಂದ ಪಾರಾಗಬೇಕೆಂದು ಅವರು ಮೇಲೆ ಹತ್ತಿದ್ದಾರೆಂದು ನನಗನಿಸುತ್ತದೆ."

"ನಡೀರಲೇ ನಡೀರಿ. ಇಂಥಾದಕ್ಕೆಲ್ಲಾ ಪೋಲೀಸು ಕೇಸು ಅಂತಾರೇನು? ಸ್ವಂತ ಖುಷಿಯಿಂದ ಮರಾ ಹತ್ತಿದ್ದಾರೆ. ಮನಸ್ಸಾದಾಗ ಕೆಳಗೆ ಇಳೀತಾರೆ. ಈ ಮಕ್ಳನ್ನ ಮರದಿಂದ ಕೆಳಗೆ ಇಳಿಸೋದು ಪೋಲೀಸರ ಕೆಲಸ ಆಗುವಂಥಾ ಕಾಲ ಬಂತಲ್ಲಾ, ಅಂತೇನಿ!" ಎಂದು ಸಬ್ ಇನ್‌ಸ್ಪೆಕ್ಟರ್ ಪೋಲೀಸರಿಗೆ ಹೇಳಿದ.

ನಾನು ಪ್ರವಾಹ ನಿಯಂತ್ರಣ ಆಫೀಸಿಗೆ ಮತ್ತೆ ಫೋನ್ ಮಾಡಿ, "ಪೋಲೀಸರು ವಿಚಾರಿಸಿಕೊಂಡು ಹೋಗಿಬಿಟ್ಟರು. ಆ ಇಬ್ಬರು ಇನ್ನೂ ಟೊಂಗೆಗೆ ನೇತು ಬಿದ್ದಿದ್ದಾರೆ. ನೀರು ಏರುತ್ತಿದೆ," ಎಂದು ತಿಳಿಸಿದೆ.

ಆಚೆ ಬದಿಯಿಂದ ಉತ್ತರ ಬಂತು : "ಹೆದರ ಬೇಡಿ. ಪೋಲೀಸರು ವಿಚಾರಿಸಲಿಕ್ಕೆ ಬಂದಿದ್ದರು. ಪ್ರಿಲಿಮಿನರಿ ಎಂಕ್ವಾಯರಿ ಅಂತೂ ಮುಗಿದಂತಾಯಿತು. ಈಗಲೇ ನಾವು ಫಾಯರ್ ಬ್ರಿಗೇಡ್ ಕಳಿಸುತ್ತೇವೆ. ಅವರು ಆ ಜನರನ್ನು ಗಿಡದಿಂದ ಕೆಳಗಿಳಿಸುತ್ತಾರೆ."

ನಾನು ಜನಜಂಗುಳಿಯಲ್ಲಿ ನಿಂತು ಫಾಯರ್ ಬ್ರಿಗೇಡ್‌ನ ಆಗಮನವನ್ನು ನಿರೀಕ್ಷಿಸುತ್ತಾ ನಿಂತೆ. ಸ್ವಲ್ಪ ಹೊತ್ತಿನಲ್ಲೇ ಗಂಟೆ ಬಾರಿಸುತ್ತಾ ಫಾಯರ್ ಬ್ರಿಗೇಡ್ ಬಂತು.

"ಫೋನ್ ಮಾಡಿದವರಾರು?" ಫಾಯರ್ ಬ್ರಿಗೇಡಿನ ಕ್ಯಾಪ್ಟನ್ ಕೇಳಿದ.

"ನಾನು."

"ಯಾಕೆ?"

ಇಬ್ಬರು ಮರಕ್ಕೆ ನೇತು ಬಿದ್ದಿದ್ದಾರೆ. ಅವರನ್ನು ಕೆಳಗಿಳಿಸಬೇಕಾಗಿದೆ."

"ಮರಕ್ಕೆ ಜೋತುಬಿದ್ದಿದ್ದಾರೆ ತಾನೆ! ಚಂದ್ರಗ್ರಹದಲ್ಲೇನೂ ಸಿಕ್ಕಿ ಬಿದ್ದಿಲ್ಲವಲ್ಲ. ತಾವಾಗಿಯೇ ಇಳಿದು ಬರುತ್ತಾರೆ ಬಿಡು. ಈಗ್ಗೇ ಇಳಿದು ಬರಬೇಕೆಂದು ಜರೂರ್

ಆದರೂ ಏನಿದೆ?"

"ನೀರು ಏರುತ್ತಿದೆ. ಕೆಳಗಿಳಿಸದಿದ್ದರೆ ಅವರು ನೀರಲ್ಲಿ ಮುಳುಗಿಹೋಗುತ್ತಾರೆ," ನಾನು ತಿಳಿಸಿ ಹೇಳಿದೆ.

"ಲೋ! ಹಚ್ಚು ಏಣೀನ," ಕ್ಯಾಪ್ಟನ್ ತನ್ನ ಸಹೋದ್ಯೋಗಿಗಳಿಗೆ ಒದರಿ ಹೇಳಿದ. ನಂತರ, "ಈ ಹಿಂದೂಸ್ಥಾನದ ಜನ ತಮಗೆ ಇಳೀಲಿಕ್ಕೆ ಬಾರದಿದ್ದಲ್ಲಿ ಯಾಕೆ ಹತ್ತುತ್ತಾರೋ ಏನೋ. ಅಮೇರಿಕಾ, ರಶಿಯಾದವರು ಚಂದ್ರಗ್ರಹ ಮುಟ್ಟಿ ತಿರುಗಿ ತಾವೇ ಪೃಥ್ವಿಗೆ ಬರುತ್ತಿದ್ದಾರೆ," ಎಂದು ಬಡಬಡಿಸಿದ.

"ಆ ಮರದ ಸುತ್ತಲೂ ಅರ್ಧ ಮೈಲಿಸವರೆಗೆ ನೀರೇ ನೀರು. ಹಿಗಾಗಿ ಏಣಿ ಗಿಡವನ್ನು ತಲುಪಲಾರದು," ನಾನು ತಿಳಿಸಿ ಹೇಳಿದೆ.

"ತಲುಪುದಿಲ್ಲ? ಹಾಗಾದರೆ ಹಗ್ಗ ಒಗಿಯಿರೋ!"

"ಅರ್ಧ ಮೈಲು ಉದ್ದ ಹಗ್ಗ ನಮ್ಮ ಹತ್ತಿರ ಇಲ್ಲ," ಫಾಯರ್ ಬ್ರಿಗೇಡಿನವನೊಬ್ಬ ಒದರಿ ಹೇಳಿದ.

"ಹಾಗದ್ರೆ ಎಂಥಾ ಹಗ್ಗ ಇದೆ ನಿಮ್ಮ ಹತ್ತಿರ? ಸಣ್ಣದೋ ದೊಡ್ಡದೋ?"

"ಸಣ್ಣದು."

"ಮಾತು ಮುಗಿದೇ ಹೋಯಿತು ಬಿಡು. ಇರಲಿ ನಮ್ಮ ಈಜುಗಾರ ಎಲ್ಲಿದ್ದಾನೆ?"

ಆತ ಮುಂದೆ ಬಂದು, ಎಲ್ಲಿ ಈಜಬೇಕು ಸಾಹೇಬರೆ"?, ಎಂದು ಕೇಳಿದ.

"ಮರದ ಹತ್ತಿರ."

"ಆ ಜನರು ಮರದ ಮೇಲಿದ್ದಾರೆಯೇ ಹೊರತು ನೀರಿನಲ್ಲಿ ಮುಳುಗಿಲ್ಲ. ಇದು ಈಜುಗಾರರ ಕೆಲಸವಲ್ಲ," ನಾನು ಹೇಳಿದೆ.

ಫಾಯರ್ ಬ್ರಿಗೇಡಿನ ಕ್ಯಾಪ್ಟನ್ ಸಿಟ್ಟಿಗೇ ಎದ್ದ:

"ನೋಡು, ನೀನು ನಮ್ಮ ಕೆಲಸದಲ್ಲಿ ಅಡ್ಡ ಬರಬಾರದು. ನಮ್ಮ ಮುಂದೆ ಮೂರೇ ಮೂರು ದಾರಿ ಇವೆ: ಏಣಿ ಏರಿಸೋದು, ಹಗ್ಗ ಒಗೆಸೋದು, ಇಲ್ಲ, ಈಜುಗಾರನ್ನ ಕಳಿಸೋದು. ಅವರಿಬ್ಬರೂ ಮರದಿಂದ ಇಳಿಯಬೇಕಿದ್ದರೆ ಮರದವರೆಗೂ ದಾರಿಯಾದರೂ ಮಾಡಿಸಿಕೊಡು. ಇಲ್ಲಾದ್ರೆ ನೀರು ಇಳಿಯೋ ತನಕಾ ಸುಮ್ಮನೆ ಕೂಡು. ಆಮೇಲೆ ನಾವು ಅಲ್ಲಿಯವರೆಗೆ ವ್ಯಾನ್ ಒಯ್ದು ಏಣಿ ತಗಲಿಸಿ ಅವರನ್ನು ಕೆಳಗಿಳಿಸುತ್ತೇವೆ. ಇಲ್ಲ, ನಮ್ಮ ಹಗ್ಗದ ಅಳವಿನಲ್ಲಿಯೇ ಬರುವಷ್ಟು ಅಂತರದ ತನಕ ನೀರಲ್ಲಿಯೇ ಮುಂದೆ ಬರಲಿಕ್ಕೆ ಹೇಳು. ಆಗ ನಾವು ಅವರನ್ನು ಹಗ್ಗದಿಂದ ಎಳೆದು ತೆಗೆಯುತ್ತೇವೆ. ಇದೂ ಆಗದಿದ್ದರೆ ಅವರಿಗೆ ನೀರಲ್ಲಿ ಮುಳುಗಲಿಕ್ಕೆ ಹೇಳು. ಆಗ ನಮ್ಮ ಈಜುಗಾರ ಅವರ ಹೆಣಗಳನ್ನು ಇತ್ತ ಎಳೆದು ತರುತ್ತಾನೆ."

"ಇದಾವುದೂ ಸಾಧ್ಯವಿಲ್ಲ."

"ಇಲ್ಲದಿದ್ದರೆ ಇಲ್ಲ, ನಾವಂತೂ ಹೋಗುತ್ತೇವೆ," ಅಂದು, ತನ್ನ ಜನರತ್ತ ತಿರುಗಿ, "ನಡಿಯಿರೋ! ಸಾರ್ವಜನಿಕರು ಸಹಕಾರ ಕೊಡದಿದ್ದರೆ ನಮಗಾದ್ರೂ ಏನು ಮಾಡಲಿಕ್ಕಾದೀತು," ಅಂದ. ಗಂಟೆ ಬಾರಿಸುತ್ತಾ ವ್ಯಾನ್ ಹೊರಟು ಹೋಯಿತು.

ಮತ್ತೆ ನಾನು ಮಹಾಪೂರ ನಿಯಂತ್ರಣ ಆಫೀಸಿಗೆ ಫೋನ್ ಮಾಡಿದೆ;

"ಫಾಯರ್ ಬ್ರಿಗೇಡಿನವರೂ ಹೊರಟು ಹೋದರು," ನಾನು ಹೇಳಿದೆ.

"ಮತ್ತೆ?" ಆತ ಕೇಳಿದ.

"ಯಾವುದಾದರೂ ಮೋಟರ್ ಬೋಟ್ ಕಳಿಸಿಕೊಡಿ."

"ಕಳಿಸುವಾ. ಆದರೆ ಅದರ ಸೈಜು ಸಣ್ಣದು. ಇಂಥ ಪ್ರವಾಹದಲ್ಲಿ ನಡೆಯಲಾರದು. ಇನ್ನೊಂದು ಮೋಟರ್ ಬೋಟು ಪೂಲಿನ ಆಚೆ ಬದಿಗಿದೆ. ಅದರ ಸೈಜು ದೊಡ್ಡದಿದ್ದುದರಿಂದ ಅದನ್ನು ಈಚೆ ಬದಿಗೆ ತರಲಿಕ್ಕಾಗುವುದಿಲ್ಲ. ಮುಂದೆ ಮತ್ತೊಮ್ಮೆ ಮಹಾಪೂರ ಬರುವುದರೊಳಗೆ ಮೀಡಿಯಮ್ ಸೈಜಿನದನ್ನು ಕೊಳ್ಳಲಾದೀತೆಂಬ ಭರವಸೆಯಿದೆ. ಆ ವರೆಗೆ ಅವರು ಮರಕ್ಕೆ ನೇತು ಬಿದ್ದಿದ್ದರೆ ನಾವು ಅಲ್ಲಿಗೆ ಮೋಟರ್ ಬೋಟು ಕಳಿಸಿಕೊಡುತ್ತೇನೆಂದು ಪ್ರಮಾಣ ವಚನವಾಗಿ ಹೇಳುತ್ತೇನೆ," ಎಂದು ಒಂದು ಕ್ಷಣ ತಡೆದು ಹೇಳಿದ: "ಮತ್ತೂ ಒಂದು ವಿಷಯ, ಇನ್ನು ಮುಂದೆ ಫೋನ್ ಮಾಡಬೇಡಿ. ಆಫೀಸಿನ ವೇಳೆ ಮುಗಿದುದ್ದರಿಂದ ನಾನು ಮನೆಯ ಕಡೆಗೆ ಹೊರಟಿದ್ದೇನೆ. ಇನ್ನು ಆಫೀಸಿನಲ್ಲಾರೂ ಇರುವುದಿಲ್ಲ. ಅಂದಹಾಗೆ ಮರಕ್ಕೆ ಜೋತುಬಿದ್ದ ಆ ಮಂಗಗಳು ನಿಮ್ಮ ಪೈಕಿ ಅಲ್ಲವಷ್ಟೆ?"

"ಅಲ್ಲ," ನಾನು ಹೇಳಿದೆ.

"ಹಾಗಾದರೆ ಮನೆಗೆ ಹೋಗಿ ಅರಾಮವಾಗಿ ನಿದ್ದೆ ಹೊಡೆಯಿರಿ," ಎಂದವನೆ ಆ ಮಹಾಶಯ ರಿಸೀವರ್ ಕೆಳಗಿಟ್ಟ.

ಆ ದಿನ ರಾತ್ರಿ ನಾನು ರೇಡಿಯೋದಲ್ಲಿ ಸುದ್ದಿ ಕೇಳಿದೆ. ಆಕಾಶವಾಣಿಯಿಂದ ಘೋಷಣೆ ಕೇಳಿ ಬರುತ್ತಿತ್ತು:

"ಯಮುನಾ ನದಿಯ ಮಹಾಪೂರವನ್ನು ತಡೆಗಟ್ಟುವುದಕ್ಕಾಗಿ ಸರಕಾರ ಅವಿರತವಾಗಿ ಪ್ರಯತ್ನಿಸುತ್ತಿದೆ. ಈವರೆಗೆ ದೊರೆತ ವರದಿಗಳ ಪ್ರಕಾರ ಮಹಾಪೂರದಲ್ಲಿ ಸಿಕ್ಕುಬಿದ್ದ ಎಲ್ಲ ಪಶುಗಳನ್ನೂ ಸುರಕ್ಷಿತ ಸ್ಥಾನಗಳಿಗೆ ತಲುಪಿಸಲಾಗಿದೆ."

(ಸಾಭಾರ : ಕಸ್ತೂರಿ ಸಂಗ್ರಹ)

* * *

ವಿಷ್ಣು ಪ್ರಜ್ಞೆ ಒಂದು ನಿವೇದನೆ

– ಮನು

'ನೀನು' ಎನ್ನಲೇ?

ನಿನ್ನನ್ನು 'ನೀನು' ಎಂದು ಏಕವಚನದಲ್ಲಿ ಕರೆಯಬಹುದೆ? ನೀನು ಬಹುವಚನಿಯೋ ಏಕವಚನಿಯೋ? ನಿನ್ನನ್ನು ಏಕವಚನದಲ್ಲಿ ಕರೆಯುವುದರಿಂದ ನಿನಗೆ ಅವಮಾನ ಮಾಡಿದಂತಾಗುವುದಿಲ್ಲ ತಾನೆ?

ಈ ಅನುಮಾನಗಳು ಬರುವುದಕ್ಕೆ ಮುನ್ನ ನಿನ್ನನ್ನು ಕರೆಯಬೇಕಾದ ಅಗತ್ಯವಿದೆಯೇ ಎಂಬುದು ಮೂಲಭೂತ ಪ್ರಶ್ನೆ. ನನ್ನೊಳಗೇ ಇರುವ ನಿನ್ನನ್ನು ಕರೆಯುವುದರ ಅಗತ್ಯವೇನು? ಯಾವುದೆ ರೀತಿಯಲ್ಲಿಯೂ ನನ್ನಿಂದ ಬೇರ್ಪಡಿಲಾಗದ ನಿನ್ನನ್ನು ಏಕಾದರೂ ಸಂಬೋಧಿಸಬೇಕು?

ಆದರೆ ಈ ವ್ಯಾವಹಾರಿಕ ಜಗತ್ತಿನಲ್ಲಿ ಅಂತಹದೊಂದು ಅಗತ್ಯ ಬೀಳುತ್ತದೆ. ನನ್ನ ಅಜ್ಞಾನದಿಂದಲೇ ಎಂದು ತಿಳಿ, ಆದರೆ ನನ್ನಿಂದ ಬೇರೆಯಾಗಿದ್ದೀಯೇನೋ ಎಂಬಂತೆ ನಿನ್ನನ್ನು ಕರೆಯುವ, ಪ್ರಾರ್ಥಿಸುವ, ಕೋರಿಕೊಳ್ಳುವ. ನಿರ್ದೇಶನ ಪಡೆಯುವ, ಅಷ್ಟೇಕೆ ಬೈಯುವ ಕೆಲಸಕ್ಕೂ ಈ ಅಗತ್ಯ ಬೀಳುತ್ತದೆ. ನನ್ನೊಳಗಿರುವ ನಿನ್ನನ್ನು ಹೊರಗೆಳೆದು ನಿಲ್ಲಿಸಿ ಮಾತನಾಡಿಸುವ ಈ ನಾಟಕೀಯ ಕ್ರಿಯೆ ಅಸಹಜವೇನೋ, ಆದರೆ ಈ ವ್ಯಾನಹಾರಿಕ ಜಗತ್ತಿನಲ್ಲಿ ಅದು ಸಹಜವಾಗಿದೆ, ಸರಿಯಾಗಿದೆ, ನ್ಯಾಯವಾಗಿದೆ.

ಹಾಗಾಗಿ ನಿನ್ನನ್ನು ಕರೆಯಬೇಕಾದ ಅಗತ್ಯ ನನಗೆ ಬಂದಿದೆ, ಈ ಆತ್ಮನಿಗೆ ಬಂದಿದೆ. ಅದಕ್ಕೆ ಇ ಪ್ರಶ್ನೆಯನ್ನು ಕೇಳಿಕೊಂಡೇ – ನಿನ್ನನ್ನು 'ನೀನು' ಎನ್ನಲೇ? ಈ ಅನುಮಾನ ಬರುವುದಕ್ಕೂ ಕಾರಣವುಂಟು. ವ್ಯವಹಾರಿಕ ಜಗತ್ತು ಎಂದೆನಲ್ಲ, ಅಲ್ಲಿ, ಆ ಶಿಷ್ಟ ಸಮಾಜದಲ್ಲಿ ಏಕವಚನ ಪ್ರಯೋಗವನ್ನು ಹಿರಿಯರು ಕಿರಿಯರಿಗೆ ಮಾಡುತ್ತಾರೆ, ಉನ್ನತ ಸ್ತರದಲ್ಲಿರುವವರು ಕೆಳಸ್ತರದಲ್ಲಿರುವವರಿಗೆ ಮಾಡುತ್ತಾರೆ. ನೀನೋ, ಎತ್ತರದಲ್ಲಿರುವವನು, ತುಂಬಾ ಎತ್ತರದಲ್ಲಿರುವವನು, ತುಂಬಾ ಹಿರಿಯ, ನಾನೋ, ತೀರಾ ಕೆಳಗಿರುವವನು, ಸೂಕ್ಷ್ಮಾಣುವಿನಂತೆ. ಆದರೂ ನಿನ್ನನ್ನು ಏಕವಚನದಲ್ಲಿ ಕರೆಯುವ ಧಾರ್ಷ್ಟ್ಯವನ್ನು ತೋರುತ್ತಿದ್ದೇನೆ. ಇದು ಸರಿಯೇ? ಯಾರೂ ಊಹಿಸಲಾಗದಷ್ಟು ಹಿರಿಯನಾದ ನಿನ್ನ ಮುಂದೆ ಅಣುವಿನಂತೆ ಇರುವ ಈ ಜೀವಿ, ನಿನ್ನನ್ನು ಏಕವಚನದಲ್ಲಿ ಕರೆಯುವುದನ್ನು ನೀನು ತಪ್ಪಾಗಿ ಭಾವಿಸುವುದಿಲ್ಲ ತಾನೆ?

ಒಮ್ಮೊಮ್ಮೆ ಇದೇ ವ್ಯಾವಹರಿಕ ಪ್ರಪಂಚದಲ್ಲಿ ನನಗೆ ಈ ಪ್ರಶ್ನೆಗೆ ಉತ್ತರವೂ ಸಿಗುತ್ತದೆ. ಮೊಮ್ಮಗನೋ, ಮರಿಮಗನೋ, ಅಜ್ಜನನ್ನೋ, ಮುತ್ತಜ್ಜನನ್ನೋ ಏಕವಚನದಲ್ಲಿಯೇ ಕರೆಯುತ್ತಾನೆ. ಹೀಗೆ ಕರೆದನೆಂದು ಅಜ್ಜನಾಗಲೀ, ಮುತ್ತಜ್ಜನಾಗಲೀ ಕೋಪಿಸಿಕೊಳ್ಳುವುದಿಲ್ಲ, ಮತ್ತೂ ಸಂತೋಷಿಸುತ್ತಾರೆ. ಭಾಷೆಯ ಮೂಲ ಸ್ವರೂಪವನ್ನು

ಉಳಿಸಿಕೊಂಡಿರುವಂತಹ ಹವ್ಯಕ ಜನಾಂಗದಲ್ಲಿ ಬಹುವಚನವೇ ಇಲ್ಲ! ಹಿರಿಯ-ಕಿರಿಯರೆಲ್ಲರೂ ಒಂದೇ ಸ್ತರದಲ್ಲಿ ವ್ಯವಹರಿಸುತ್ತಾರೆ.

ಅಂದರೆ ನೀನು ಸೃಷ್ಟಿಯನ್ನು ಆರಂಭಿಸಿದಾಗ ಎಲ್ಲವೂ ಒಂದೇ ಆಗಿರಬೇಕು ಎಂದು ಬಯಸಿದವನಿರಬೇಕು. ಅದಕ್ಕೆ ನಿನಗೆ ಬಹುವಚನಕ್ಕಿಂತ ಏಕವಚನವೇ ಪ್ರಿಯವಿರಬೇಕು. ಅಂತೇ ಅತಿ ಚಿಕ್ಕವನಾದ ನನ್ನಿಂದ ಏಕವಚನದಲ್ಲಿ ಕರೆಸಿಕೊಂಡಾಗಲೂ ನೀನು ಮುಗುಳ್ನಗುತ್ತೀಯಾ, ಅಷ್ಟೇ ಪ್ರೀತಿಯಿಂದ ಮಾತನಾಡಿಸುತ್ತೀಯ.

ಹಾಗೆಂದು ಏಕವಚನದಲ್ಲಿ ಕರೆದ ನನಗೆ ನಿನ್ನಲ್ಲಿ ಅಗೌರವವಿದೆ ಎಂದು ಭಾವಿಸಬೇಡ. ತೀರಾ ಆತ್ಮೀಯರನ್ನು ಕರೆಯುವಾಗ ಏಕವಚನ ಉಪಯೋಗಿಸುವಂತೆ, ವಯಸ್ಸಿನಲ್ಲಿ ಹಿರಿಯನಾದ ಮುತ್ತಜ್ಜನನ್ನು ಏಕವಚನದಲ್ಲಿ ಸಂಬೋಧಿಸುವಂತೆ, ನಿನ್ನನ್ನು ಏಕವಚನದಲ್ಲಿ ಸಂಬೋಧಿಸುವಾಗ ನನ್ನ ನಿನ್ನ ಮಧ್ಯೆ ಇರುವ ಗೋಡೆ ಉರುಳಿ ಬೀಳುವಂತೆ ಭಾಸವಾಗುತ್ತದೆ. ನೀನು ನನ್ನ ತೀರಾ ಹತ್ತಿರ ಬಂದು ನಿಂತಿರುವಂತೆ ಅರಿವಾಗುತ್ತದೆ. 'ತಾವು' 'ಅವರು' ಎನ್ನತ್ತಾ ಹೋದಷ್ಟು ವ್ಯಕ್ತಿ ತುಂಬಾ ದೂರನಿಂತಿರುವಂತೆ ಭಾಸವಾಗುತ್ತಾನೆ. ಅಲ್ಲವೇ? ಈ ಕಾರಣಕ್ಕಾಗಿಯಾದರೂ ನಿನ್ನನ್ನು ಹತ್ತಿರ ಕರೆಸಿಕೊಳ್ಳಬೇಕೆಂಬ ಬಯಕೆ ನಿನ್ನನ್ನು ಏಕವಚನದಲ್ಲಿ ಕರೆಯುವುದಕ್ಕೆ ನನ್ನನ್ನು ಪ್ರೇರೇಪಿಸುತ್ತದೆ.

ಹಾಗಾಗಿ ನಿನಗೆ ಇದು ಅವಮಾನ ಮಾಡುವ ವಿಷಯವಲ್ಲ ಎಂಬುದನ್ನು ಶ್ರುತಪಡಿಸುತ್ತೇನೆ. ನೀನೆಷ್ಟು ನನ್ನನ್ನು ಪ್ರೀತಿ ಮಾಡುತ್ತೀಯೋ ಅಷ್ಟೇ ನಾನೂ ಮಾಡಬೇಕೆಂಬ ಬಯಕೆ ನನ್ನದು. ನಿನ್ನ ಮಟ್ಟದ ಪ್ರೀತಿ ನನ್ನಿಂದ ಸಾಧ್ಯವಾಗದೆ ಹೋಗಬಹುದು. ನೀನು ಈ ನಿಟ್ಟಿನಲ್ಲಿ ತುಂಬಾ ದೂರ ಹೋಗಿಬಿಡುತ್ತೀಯಾ, ನಿನ್ನ ದೃಷ್ಟಿ ತುಂಬಾ ವಿಶಾಲವಾದದ್ದು - ಆಕಾಶದಷ್ಟು, ಸಾಗರದಷ್ಟು. ಆದರೆ ನನ್ನ ಇತಿಮಿತಿಯೊಳಗೆ, ನಾನೂ ಸ್ವಲ್ಪ ಮಟ್ಟಿನ ನಿನ್ನ ಮನೋಭಾವಗಳನ್ನು ನನ್ನಲ್ಲಿ ಪ್ರತಿಬಿಂಬಿಸುವ ಪ್ರಯತ್ನ ಮಾಡುತ್ತೇನೆ. ಅದಕ್ಕೆ ನಿನ್ನ ಅಭ್ಯಂತರವಿಲ್ಲ ಎಂದು ನಾನು ಭಾವಿಸಲೆ?

ಆದರೂ ಈ ದಿಕ್ಕಿನಲ್ಲಿ ನನ್ನ-ನಿನ್ನ ಅಂತರ ಬಹಳ ಅಗಾಧ, ನಿನ್ನ ಪ್ರಿತಿ ಆಕಾಶದಷ್ಟಾದರೆ, ನನ್ನದು ಆಕಾಶದಲ್ಲಿ ಹಾರುತ್ತಿರುವ ಒಂದು ಗರುಡನ ಪ್ರೀತಿಯಾಗಬಹುದು, ಅಷ್ಟೆ. ಆದರೆ ಗರುಡ ಅತ್ತಿಂದಿತ್ತ ಹಾರಾಡುತ್ತಾ ಆಕಾಶವನ್ನೇ ಅಳೆಯಲು ಹೊರಟಂತೆ ಭಾವಿಸಿದರೆ ತಪ್ಪಾಗಲಾರದಲ್ಲವೆ? ಅಳೆದೆ ಎಂದು ಧೈರ್ಯವಾಗಿ ಹೇಳಲು ಹೊರಡುವುದು ಅಹಂಕಾರವಾಗುತ್ತದೆ, ಅಳೆದು ನೋಡಲೆ ಎಂದು ನಿನ್ನನ್ನೆ ಕೇಳುವುದು ವಿನಮ್ರವಾದ ಮಾತಾಗುತ್ತದೆ. ಅಂತಹ ಅವಕಾಶ ಮಾಡಿಕೊಡು ಎಂದಷ್ಟೆ ನಾನು ಕೇಳಿಕೊಳ್ಳಬಲ್ಲೆ.

ಹೀಗಾಗಿ 'ನೀನು' ನೀನಾಗಿ ಬಿಡುತ್ತೀಯಾ. ನಾನು ಏನು ಹೇಳಿದೆ ಎಂದು ನೋಡದೆ ನನ್ನ ಬೆನ್ನು ತಟ್ಟುತ್ತೀಯಾ, ನನ್ನ ಕೈ ಹಿಡಿದು ನಡೆಸುತ್ತೀಯಾ, ನನ್ನ ಹೆಜ್ಜೆಗೆ ಸಮವಾಗಿ ಹೆಜ್ಜೆ ಹಾಕುತ್ತೀಯಾ, ಅಷ್ಟೇಕೆ ಕೆಲವೊಮ್ಮೆ ನನ್ನನ್ನೇ ಎತ್ತಿಕೊಂಡು ನೀನು ನಡೆಯುತ್ತೀಯಾ! ಹಾಗಾಗಿ, ನಿನಗೆ ಯಾರೂ ಸಮವಿಲ್ಲ. ನೀನು, ನೀನು ಮಾತ್ರ.

ನಿನ್ನನ್ನು ಹೋಲಿಸಲು ಯಾರೂ ಇಲ್ಲ. ಹೋಲಿಸಲು ಹೋದರೆ, ಹೋಲಿಸಲು ಹೋದ ವ್ಯಕ್ತಿ, ಶಕ್ತಿ, ವಸ್ತು ಮಾರು ದೂರವಲ್ಲ, ಕೋಸು ದೂರವಲ್ಲ, ದಿಗಂತದ ಅಂಚಿನಲ್ಲಿಯೂ ನಿಲ್ಲಲಾರ, ನಿಲ್ಲಲಾರದು.

ಅಂತಹ ಆತ್ಮೀಯನಾದ ನಿನ್ನನ್ನು 'ನೀನು' ಎಂದು ಕರೆಯುವುದಕ್ಕೆ ನನಗೆ ಹೆಮ್ಮೆ ಎನಿಸುತ್ತದೆ, ಆನಂದವಾಗುತ್ತದೆ.

ನಿನ್ನನ್ನು ಕರೆಯಬೇಕೇಕೆ?

ಆಯಿತು 'ನೀನು' ಎಂದು ಕರೆಯಲು ಸಾಕಷ್ಟು ತರ್ಕ, ಮನೋಭಾವ, ಆತ್ಮೀಯತೆಯಿದೆ ಎಂದು ಒಪ್ಪಿಕೊಂಡಿದ್ದೇ ಆದರೂ, ನಿನ್ನನ್ನು ಕರೆಯಬೇಕೇಕೆ ಎಂಬ ಮೂಲಭೂತ ಪ್ರಶ್ನೆ ಇನ್ನೂ ಉಳಿದು ಹೋಗುತ್ತದೆ.

ಒಬ್ಬರನ್ನು ಕರೆಯುವುದು ಏತಕ್ಕೆ? ಈ ವ್ಯಾವಹಾರಿಕ ಪ್ರಪಂಚದಲ್ಲಿ ಅದಕ್ಕೆ ಅನೇಕ ಕಾರಣಗಳು ಇರಬಹುದು–ಸ್ವಲ್ಪ ದೂರದಲ್ಲಿ ಹೋಗುತ್ತಿರುವ ವ್ಯಕ್ತಿಯನ್ನು ಹತ್ತಿರ ಕರೆಯಲು; ತನ್ನೊಬ್ಬನಿಗೆ ಈ ಮೂಟೆಯನ್ನು ಎತ್ತಲು ಆಗುತ್ತಿಲ್ಲ, ಅದನ್ನೆತ್ತಿ ತಲೆಯ ಮೇಲೆ ಇರಿಸು ಎಂದು; ನನ್ನ ಕಣ್ಣು ಸರಿಯಾಗಿ ಕಾಣಿಸುತ್ತಿಲ್ಲ, ಈ ಎರಡು ಹೆಜ್ಜೆ ದಾಟಿಸಿಬಿಡು ಎಂದು–ಒಂದೇ ಎರಡೇ, ಹೀಗೆ ಹಲವು ಕಾರಣಗಳು ಇರಬಹುದು. ಈ ಎಲ್ಲವೂ ಸಂಗತವೇ, ಅರ್ಥವತ್ತಾದವೇ, ದೈನಂದಿನ ಜೀವನದಲ್ಲಿ ಒಬ್ಬನು ಮತ್ತೊಬ್ಬನಿಂದ ಪಡೆಯುವ ಸಹಾಯದ ಚಿತ್ರಣವೇ. ಅದರಲ್ಲಿ ಸಂಶಯವಿಲ್ಲ.

ಹಾಗಿರುವಾಗ ನಿನ್ನನ್ನು ಏಕೆಂದು ಕರೆಯಲಿ? ನೀನೋ ನನ್ನ ಕಣ್ಣಿಗೆ ಕಾಣುವವನಲ್ಲ. ನನ್ನಲ್ಲೇ ಇದ್ದೀಯಾ, ನನ್ನ ಪಕ್ಕದಲ್ಲಿದ್ದೀಯ, ಈ ಇಡೀ ಪ್ರಪಂಚದ ತುಂಬಾ ವ್ಯಾಪಿಸಿದ್ದೀಯ ಎಂದು ಅರಿತರೂ ಸಹ, ಈ ವ್ಯಾವಹಾರಿಕ ಪ್ರಪಂಚದ ಭೌತಿಕ ವ್ಯವಹಾರಗಳಿಗೆ ಅಗತ್ಯವಿದೆ. ಕರೆಯುವಿಕೆಯಿಂದ ನಿನ್ನ ಸಹಾಯವನ್ನು ಪಡೆಯುತ್ತೇನೆ, ಪಡೆಯುತ್ತಿದ್ದೇನೆ ಎಂದು ಹೇಗೆ ಅರಿಯಲಿ, ಹೇಗೆ ಅರ್ಥೈಸಲಿ?

ಹೀಗೆ ಆಲೋಚನೆಗೆ ಇಳಿದಾಗ, ವ್ಯಾವಹಾರಿಕ ಜಗತ್ತಿನಲ್ಲಿ ನಡೆಯುತ್ತಿರುವುದನೆಲ್ಲ ನಿನ್ನ ಮೇಲೆ ಆರೋಪಿಸುವುದು ಎಷ್ಟರಮಟ್ಟಿಗೆ ಸರಿ ಎಂಬ ಮಾತು ಬರುತ್ತದೆ. ವ್ಯಾವಹಾರಿಕ ಜಗತ್ತು ಒಂದು ಭೌತಿಕ ಜಗತ್ತು ಅದರಲ್ಲಿ ಪ್ರತಿಯೊಂದೂ ಕೊಡು–ತೆಗೆದುಕೊಳ್ಳುವ ಮುಟ್ಟುವ–ಕಾಣುವ, ಆಸ್ವಾದಿಸುವ–ಆಘ್ರಾಣಿಸುವ ಮಟ್ಟದಲ್ಲೇ ನಡೆಯುತ್ತದೆ. ಆದರೆ ನೀನು ಈ ಎಲ್ಲದಕ್ಕೂ ಅತೀತನಾದವನು. ಕಂಡರೂ ಕಾಣದಂತಹವನು. ಮುಟ್ಟಿದರೂ ಸ್ಪರ್ಶಜ್ಞಾನಕ್ಕೆ ಸಿಲುಕದವನು. ಒಟ್ಟಿನಲ್ಲಿ ನನ್ನ ಪಂಚೇಂದ್ರಿಯಗಳ ಮಿತಿಯನ್ನು ಮೀರಿ ನಿಂತ ಅನುಭವಾತೀತನು ನೀನು. ಹಾಗಿರುವಾಗ ಎಷ್ಟರ ಮಟ್ಟಿಗೆ ಈ ಲೌಕಿಕ ನ್ಯಾಯದಲ್ಲಿ, ಲೋಕದ ತಕ್ಕಡಿಯಲ್ಲಿ ನಿನ್ನನ್ನೂ ಅಳೆದು ನೋಡುವುದು ಸಂಗತ?

ಒಂದು ದೃಷ್ಟಿಯಲ್ಲಿ ಇದು ಸಂಗತವೇನೋ ಎನಿಸುತ್ತದೆ. ಮೇಲು ನೋಟಕ್ಕೆ ಅತೀತನಾದ ನಿನ್ನನ್ನು ಮಿತಿಯೊಳಗೆ ನೋಡುವುದು ಸರಿ ಎನಿಸದು. ಆದರೆ ನನಗೆ ನೀನು ಈ ದೇಹವನ್ನು ಕೊಟ್ಟಿದ್ದೀಯ. ಹಾಗೇ ಈ ದೇಹಕ್ಕೆ ತನ್ನದೇ ಆದ

ಮಿತಿಗಳನ್ನು ಇಟ್ಟಿದ್ದೀಯ. ಈ ಮಿತಿಯೊಳಗೆ ಒಂದು ಮಿತಿಯಾದ ಅನುಭವವನ್ನು ಪಡೆಯುವ ತತ್ವಕ್ಕೆ ನಾನು ಒಗ್ಗಿಹೋಗಿದ್ದೇನೆ. ನನ್ನ ಕಣ್ಣು ಕೆಲವು ತರಂಗಗಳನ್ನು ಮಾತ್ರ ಕಾಣಬಲ್ಲದು. ನೀನು ಸೂರ್ಯನ ಮೂಲಕ ಕಳುಹಿಸುವ ವಿಶಾಲವಾದ ವಿದ್ಯುದಯಸ್ಕಾಂತೀಯ ತರಂಗಗಳಲ್ಲಿ (ಒಂದು ಕಡೆ ವಿದ್ಯುತ್/ ರೇಡಿಯೋ ತರಂಗಗಳಾದರೆ ಮತ್ತೊಂದು ತುದಿಯಲ್ಲಿ ವಿಶ್ವ ಕಿರಣಗಳು ಇರುವ ಕಡೆ) ತೀರಾ ಸಣ್ಣದಾದ ಬೆಳಕಿನ ತರಂತಮಾನದ ಕಿರಣಗಳನ್ನು ಮಾತ್ರ ಕಣ್ಣು ನೋಡಬಲ್ಲದು. ಅಂದರೆ ಅಗಾಧವಾದ ತರಂಗಮಾನದಲ್ಲಿ ನಾವು ತುಂಬಾ ಚಿಕ್ಕ ತರಂಗ ಮಾನವನ್ನು ಮಾತ್ರ ಗ್ರಹಿಸಿಬಲ್ಲೆವು. ಇದು ಕಣ್ಣಿಗಿರುವ ಮಿತಿ.

ಇನ್ನು ಬೇರೆ ಅಂಗಾಂಗಗಳ ಕ್ಷಮತೆಯನ್ನು ಗಮನಿಸದಾಗಲೂ ಇದೇ ಮಾತು ನಮಗೆ ಕೇಳಿ ಬರುತ್ತದೆ. ಕಿವಿ, ಕೆಲವೇ ತರಂಗ ಮಾನದ ಶಬ್ದವನ್ನು ಮಾತ್ರ ಕೇಳಬಲ್ಲದು. ನಾಲಿಗೆ ಕೆಲವೇ ರುಚಿಗಳನ್ನು ಗ್ರಹಿಸಬಲ್ಲದು. ಚರ್ಮದ ಸ್ಪರ್ಶಜ್ಞಾನವಂತೂ ತೀರಾ ಕಡಿಮೆ.

ಹೀಗೆ ಕಡಿಮೆ ಕ್ಷಮತೆಯನ್ನು ನನ್ನ ಅಂಗಗಳಿಗೆ ನೀನು ಕೊಟ್ಟಿದ್ದೀಯ. ಹಾಗೆ ನೋಡಿದರೆ ಪ್ರಾಣಿಗಳಿಗೆ ನನಗಿಂತ ಉತ್ತಮ ಶಕ್ತಿಯನ್ನು ನೀನು ಕೋಟ್ಟಿದ್ದೀಯಾ? ನಾಯಿಯಂತಹ ಪ್ರಾಣಿಗಳ ಆಘ್ರಾಣಿಸುವ ಶಕ್ತಿ, ಕೇಳುವ ಶಕ್ತಿ ಅನೇಕ ಪಟ್ಟು ಹೆಚ್ಚಾಗಿದೆ. ಮನುಷ್ಯನಿಗಿಂತ ಅನೇಕ ಪ್ರಾಣಿಗಳಿಗೆ ಅನೇಕವಾಗಿ ಅಂಗಾಂಗಗಳ ಕ್ಷಮತೆ ಹೆಚ್ಚಾಗಿರುವುದು ನಮಗೆಲ್ಲ ತಿಳುವಳಿಕೆಗೆ ಬಂದಿದೆ.

ಹಾಗಾಗಿ ನಾನು ಈ ನನ್ನ ಮಿತಿಗೆ ಸಿಕ್ಕ ಅಂಗಾಂಗ ಕ್ಷಮತೆಯನ್ನು ಉಪಯೋಗಿಸಿಕೊಂಡೇ ನಿನ್ನನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕಾಗಿದೆ, ನಿನ್ನ ಜೊತೆ ವ್ಯವಹರಿಸಬೇಕಾಗಿದೆ, ನಿನ್ನನ್ನು ಕರೆಯಬೇಕಾಗಿದೆ. ಹಾಗಾಗಿ ನಾನು ಮಾಡುವ ಪ್ರಯತ್ನಕ್ಕೆ ಒಂದು ಮಿತಿಯಿದೆ ಎಂದು ನನಗೆ ಗೊತ್ತಿದೆ. ಈ ವ್ಯಾವಹಾರಿಕ ಜಗತ್ತಿನ ಭಾರ ಈ ದೇಹದ ಮೇಲೆ ಕುಳಿತಿದೆ ಎಂಬುದು ನಿಜ.

ಹಾಗಾಗಿ ನಾನು ನಿನ್ನ ಸಂಪರ್ಕ ಪಡೆಯಬೇಕಾದರೆ ಮಿತಿಯೊಳಗೆ ಇರುವ ನನ್ನ ಅಂಗಾಂಗ ಜ್ಞಾನದ ಮೂಲಕವೇ ಆಗಿದೆ. ಆದರೆ ಹಾಗೆ ಮಾಡುವಾಗ ಈ ಮಿತಿಯನ್ನು ದಾಟಿಹೋಗುವ ಪ್ರಯತ್ನವನ್ನು ಮಾಡುತ್ತೇನೆ ಎಂಬುದು ಸತ್ಯ. ಕಣ್ಣಿಗೆ ಕಾಣದ ನಿನ್ನನ್ನು ನೋಡಲು ಪ್ರಯತ್ನಿಸುತ್ತೇನೆ. ಕಿವಿಯಲ್ಲಿ ಕೇಳಲಾಗದ ನಿನ್ನ ಮಾತುಗಳನ್ನು ಕೇಳಲು ಇಚ್ಛಿಸುತ್ತೇನೆ. ಸ್ಪರ್ಶಮಾಡಲಾಗದ ನಿನ್ನನ್ನು ಮುಟ್ಟಲು ಆಶಿಸುತ್ತೇನೆ. ತನ್ಮೂಲಕ ನನ್ನ ಆಶೆ ಆಕಾಂಕ್ಷೆಗಳನ್ನು, ನಿನ್ನನ್ನು ಪ್ರಾರ್ಥಿಸಲೇಬೇಕು ಎಂಬ ಮಹದಿಚ್ಛೆಯನ್ನು ತೋರಿಸುತ್ತೇನೆ.

ಆದರೂ ಒಂದು ಪ್ರಶ್ನೆಗೆ ಇನ್ನೂ ಸ್ಪಷ್ಟ ಉತ್ತರ ಬರಲಿಲ್ಲ. ನಿನ್ನನ್ನು ಕರೆಯ ಬೇಕೇಕೆ?

ಆರಂಭದಲ್ಲಿ ಕರೆಯುವುದಕ್ಕೆ ಅನೇಕ ಲೌಕಿಕ ಕಾರಣಗಳನ್ನು ನಾನು ನೆನಪಿಸಿಕೊಂಡೆ. ಅವೆಲ್ಲವೂ ಉಂಟು. ಆದರೆ ಅದಕ್ಕಿಂತ ಮಹತ್ತರವಾದ ಮತ್ತೊಂದು ಕಾರಣವೂ ಉಂಟು. ಅದು ನನ್ನ–ನಿನ್ನ ಸಂಬಂಧಕ್ಕೆ ಸೇರಿದ್ದು. ನೀನು ನನ್ನಿಂದ ಎಂದೂ ದೂರ ಹೋಗಕೂಡದು ಎಂಬ ಅಭಿಲಾಷೆಯಿಂದ ನೀನು ನೀನಾಗಿ ದೂರ

ಹೋಗುತ್ತೀಯ ಎಂದಲ್ಲ. ನನ್ನ ಭ್ರಮೆಯಿಂದಾಗಿ, ಈ ಲೋಕದ ವ್ಯವಹಾರದಲ್ಲಿ ನನ್ನನ್ನು ತೊಡಗಿಸಿಕೊಂಡಿರುವುದರಿಂದ, ನಾನು ನಿನ್ನನ್ನು ಮರೆತು ಬಿಡುತ್ತೇನೆ, ನಿನ್ನಿಂದ ದೂರ ಹೋದೆ ಎಂದುಕೊಳ್ಳುತ್ತೇನೆ. ಅಂತಹ ಪರಿಸ್ಥಿತಿ ಬರದಿರಲಿ ಎಂಬುದೇ ನನ್ನ ಪ್ರಾರ್ಥನೆ. ಅದನ್ನು ಹೇಳಲೆಂದೇ ನಿನ್ನನ್ನು ಕರೆಯಬೇಕು. ನಿನ್ನನ್ನು ಹಾಗೆ ಕರೆದು ವಿನಂತಿಸಿಕೊಳ್ಳುವುದರಿಂದ ಈ ನನ್ನ ಭ್ರಮೆ ದೂರವಾಗುತ್ತೇನೋ ಎಂದು ಆಸೆ.

ವ್ಯಾವಹಾರಿಕ ಲೋಕದಲ್ಲಂತೂ ಕ್ಷಣಕ್ಷಣವೂ ನೀನು ನನ್ನನ್ನು ನಡೆಸುತ್ತೀಯಾ. 'ತೃಣಮಪಿ ನ ಚಲತಿ ತೇನವಿನಾ' ಎಂದು ತಿಳಿದವರು ಹೇಳುತ್ತಾರೆ. ಅದು ನನಗೆ ಗೊತ್ತಿಲ್ಲ ಎಂದಲ್ಲ, ಗೊತ್ತಿದೆ. ಆದರೂ ಯಥಾಪ್ರಕಾರ ನನ್ನ ಭ್ರಮೆಯಿಂದಾಗಿ, ನನ್ನ ಇತಿಮಿತಿಗಳೊಂದಿಗೆ ನನ್ನ ಜೊತೆ ಸದಾಕಾಲ ನೀನಿರುತ್ತೀಯ ಎಂಬುದನ್ನು ಮರೆತು ಬಿಡುತ್ತೇನೆ. ಅದನ್ನು ಜ್ಞಾಪಿಸಿಕೊಳ್ಳಲು ಆಗಾಗ್ಗೆ ನಾನು ನಿನ್ನನ್ನು ಕರೆಯುತ್ತಿರಬೇಕು. ನೀನು ನನ್ನನ್ನು ಮರೆತು ಬಿಡುತ್ತೀಯ ಎಂದಲ್ಲ, ನಾನು ನಿನ್ನನ್ನು ಮರೆತು ಬಿಡುತ್ತೇನೆ ಎಂದು!

ಇದೆಲ್ಲದರ ಮಧ್ಯೆ ಲೌಕಿಕ ಕಾರಣಗಳಿಗಾಗಿ ನಿನ್ನನ್ನು ಕರೆಯುವುದು ಸರಿಯೋ, ತಪ್ಪೋ ಎಂಬುದೊಂದು ಜಿಜ್ಞಾಸೆ. ಈ ಭೂಮಿಯ ಮೇಲೆ ಬದುಕಿರುವವರೆಗೂ, ಈ ದೇಹದ ಸಂಬಂಧ ಉಳಿದೇ ಇರುತ್ತದೆ. ಹಾಗಾಗಿ ಈ ಲೋಕ-ದೇಹದ ಬಂಧನವನ್ನು ನಾನು ಪೂರ್ಣವಾಗಿ ಕಿತ್ತು ಹಾಕಬೇಕಾದರೆ, ಅದು ನಿನ್ನಲ್ಲಿ ನಾನು ಒಂದಾದಾಗ. ನನಗೆ ಬೇಕೋ, ಬೇಡವೋ, ಅಂತೂ ದೇಹದಿಂದ ಇರುವವರೆಗೆ ದೇಹಕ್ಕೆ ಸಂಬಂಧಿಸಿದ ಧರ್ಮಗಳನ್ನು, ಕಟ್ಟುಪಾಡುಗಳನ್ನು ಪಾಲಿಸಲೇ ಬೇಕಾಗುತ್ತದೆ. ಅದು ಕೆಲವು ಸರಿ ಎನ್ನಿಸಬಹುದು, ಇನ್ನು ಕೆಲವು ಸರಿಯಲ್ಲ ಎನ್ನಿಸಬಹುದು. ಆದರೆ ಈ ದೇಹಧರ್ಮವನ್ನು ಉಲ್ಲಂಘಿಸಲು ಹೋಗಿ ಕ್ಲಿಷ್ಟ ಸಮಸ್ಯೆಗಳಿಗೆ ಸಿಲುಕಿಕೊಳ್ಳುವ ಬದಲು, ದೇಹದೊಂದಿಗೆ ಇದ್ದು ನಿನ್ನನ್ನು ಸದಾಕಾಲ ನೆನಪಿಸಿಕೊಳ್ಳುವಂತೆ ನೀನು ಕೃಪೆ ಮಾಡಬೇಕು. ಅದಕ್ಕಾಗಿ ಲೌಕಿಕ ಪ್ರಾರ್ಥನೆಗಳನ್ನು ತಳ್ಳಿಹಾಕಲು ಸಾಧ್ಯವಿಲ್ಲ. ಇಂತಹ ಲೌಕಿಕ ಪ್ರಾರ್ಥನೆಗಳು ಋಜುವಾಗಿದ್ದರೆ ಸಾಕು. ಅಂತಹದೊಂದು ಕೃಪೆ ಬೇಕು. ನನ್ನನ್ನು ಕೈಹಿಡಿದು ನಡೆಸುವಾಗ ಪ್ರಾರ್ಥನೆಯ ದಾರಿಯನ್ನು ಸರಿಯಾಗಿರುವಂತೆ ಮಾಡು.

ನಿನಗೊಂದು ಹೆಸರೇ?

ಎಲ್ಲಾದರೂ ಮಗನು ತಂದೆಗೆ ಹೆಸರಿಟ್ಟಿದ್ದನ್ನು ಕೇಳಿದ್ದೀಯಾ? ತಂದೆ ತಾಯಿಯರು ಮಕ್ಕಳಿಗೆ ನಾಮಕರಣ ಮಾಡುವುದು ಪ್ರಪಂಚದ ನೀತಿ. ಮಕ್ಕಳು ಬೆಳೆದು ತಂದೆ ತಾಯಿಯರ ಹೆಸರಿಗೆ ಕಳಂಕ ಬರದಂತೆ, ಅವರ ಹೆಸರೂ ಪ್ರಖ್ಯಾತವಾಗುವಂತೆ ಮಾಡಬೇಕಾದ್ದು ಧರ್ಮ.

ಆದರೆ ಇಲ್ಲಿ ಏನಾಗುತ್ತಿದೆ ನೋಡು ನಾನು ನಿನಗೆ ನಾಮಕರಣ ಮಾಡುತ್ತಿದ್ದೇನೆ! ನಿನಗೆ ಒಂದು ಹೆಸರನ್ನೋ, ಅಥವಾ ಅನೇಕ ಹೆಸರುಗಳನ್ನೋ

ಇಟ್ಟು ಹಠ ಹಿಡಿದು ನಾನಿಟ್ಟ ಹೆಸರೇ ಸರಿ ಎಂದು ಕೂಗಾಡುತ್ತೇನೆ. ನೀನು ಯಾರು, ನಿನ್ನ ವೈಶಾಲ್ಯವೇನು, ನಿನ್ನಿಂದ ಈ ವಿಶ್ವದಲ್ಲಿರುವ ಪ್ರತಿಯೊಂದು ಚರಾಚರ ವಸ್ತುವೂ ಉದ್ಭವವಾಗಿದೆ ಎಂದು ತಿಳೀದೂ ನಿನಗೆ ಹೆಸರು ಇಡಲು ಪ್ರಯತ್ನಿಸುತ್ತೇನೆ.

ಆಶ್ಚರ್ಯವಲ್ಲವೇ ! !

ಒಂದು ಕಡೆ ಆಶ್ಚರ್ಯವೆನಿಸಿದರೂ, ಮತ್ತೊಂದು ಕಡೆ ಆಶ್ಚರ್ಯವೆನಿಸುವುದಿಲ್ಲ. ಕಾರಣ ನಿನ್ನನ್ನು ಕರೆಯುವ ಅಧಿಕಾರವನ್ನು ನಾನು ಯಾವಾಗ ಪಡೆದುಕೊಂಡೆನೊ, ಆವಾಗಲೇ ನನಗೆ ಇಷ್ಟವಾದ ಹೆಸರಿನಿಂದ ಕರೆಯುವ ಅಧಿಕಾರವನ್ನು ನಾನು ಪಡೆದೆ. ಅಧಿಕಾರ ಎಂಬ ಪದವೇ ಸರಿಯಲ್ಲವೇನೊ. ಹಾಗೆ ನೋಡಿದರೆ ನಿನ್ನ ನನ್ನ ಸಂಬಂಧಗಳನ್ನು ತಿಳಿಸಲು ನಾನು ಉಪಯೋಗಿಸುವ ಭಾಷೆಯೂ ಭಾವನೆಯು ಪರಾಕಾಷ್ಠೆಯನ್ನು ಮುಟ್ಟಲು ಸಫಲವಾಗುವುದಿಲ್ಲ, ಇರಲಿ.

ಹಾಗಾಗಿ ನಮ್ಮೆಲ್ಲರ ತಂದೆಯಾದ ನಿನಗೆ, ಎಲ್ಲ ಜೀವಿಗಳನ್ನು ತನ್ನಲ್ಲಿ ಒಳಗೊಂಡಿರುವ ನಿನಗೆ, ನಾನು ನಾಮಕರಣ ಮಾಡುವ ಧಾರ್ಷ್ಟ್ಯವನ್ನು ತೋರುತ್ತೇನೆ. ನಿನಗೆ ಇದು ಕೋಪ ತಂದರೂ ತರಬಹುದು. ಆದರೆ ನನಗೆ ಗೊತ್ತು, ನೀನು ಅನೇಕ ಬಾರಿ ಮುಗುಳು ನಕ್ಕು ಸುಮ್ಮನಾಗಿ ಬಿಡುತ್ತಿಯಾ ಎಂದು. ಎಳೆಯ ಮಕ್ಕಳ ಚೇಷ್ಟೆಗೆ ಎಲ್ಲಾದರೂ ಹಿರಿಯರು ಕೋಪಿಸಿಕೊಳ್ಳುತ್ತಾರೆಯೇ. ಅದರಲ್ಲೂ ಅಂತಹ ವಿಶಾಲವಾದ ಹೃದಯವುಳ್ಳ ನೀನು, ಎಲ್ಲಾ ತಪ್ಪುಗಳನ್ನು ಕ್ಷಮಿಸಿ ಬಿಡುವಾಗ, ನಿನ್ನನ್ನು ಹೆಸರು ಹಿಡಿದು ಕರೆಯುವ ತಪ್ಪನ್ನು ಕ್ಷಮಿಸುತ್ತೀಯ ಎಂದು ನನಗೆ ಚೆನ್ನಾಗಿ ಗೊತ್ತು.

ಹಾಗೆ ನೋಡಿದರೆ ಹಿರಿಯರನ್ನು ಹೆಸರು ಹಿಡಿದು ಕರೆಯುವುದು ನಾಗರಿಕವಲ್ಲ. ತಾತ, ಅಜ್ಜ, ಮುತ್ತಜ್ಜ, ಅಜ್ಜಿ ಎಂಬ ಉಪಾಧಿಗಳಿಂದ ಕರೆಯುವುದೇ ಸರಿಯಾದ ಕ್ರಮ. ಅಪ್ಪ, ಅಮ್ಮ ಎಂದು ತಂದೆ–ತಾಯಿಯರನ್ನು ಕರೆಯುತ್ತೇವೆ. ಬೇರೆಯವರು 'ಏನೋ ನಿನ್ನ ತಂದೆಯ ಹೆಸರು ತಾಯಿಯ ಹೆಸರು?' ಎಂದು ಕೇಳಿದಾಗ, ಅವರ ಹೆಸರನ್ನು ಹೇಳುತ್ತೇವೆ. ಅದು ಬಿಟ್ಟು ಮತ್ತೆಲ್ಲ ವೇಳೆ ಉಪಯೋಗಿಸುವ ಹೆಸರು ತಂದೆ, ತಾಯಿ, ಅಪ್ಪ, ಅಮ್ಮ.

ಒಂದು ದೃಷ್ಟಿಯಲ್ಲಿ ನಿನ್ನನ್ನು ಕರೆಯಲು ಇದೇ ಸರಿಯಾದ ಮಾರ್ಗವೆನಿಸುತ್ತದೆ. ಇಡೀ ಜಗತ್ತಿನ ಜೀವರಾಶಿಗಳಿಗೆ, ನಿರ್ಜೀವ ರಾಶಿಗಳಿಗೆ ಪಿತೃಸ್ಥಾನ, ಮಾತೃಸ್ಥಾನದಲ್ಲಿರುವ ನಿನ್ನನ್ನು ಇಂತಹ ಸರಳವಾದ, ಎಲ್ಲರೂ ಉಪಯೋಗಿಸಬಹುದಾದ, ಭಾಷಾಭಿವ್ಯಕ್ತಿಗೆ ಕಂಟಕವಾಗದ ತಂದೆ ಅಥವಾ ತಾಯಿ ಎಂಬ ಪದ ಪ್ರಯೋಗವೇ ಸರಿ.

ಈ ಮಾತು ಬಂದಾಗ ಯಾರೋ ಕೆದಕುತ್ತಾರೆ–ನೀನು ಹೆಣ್ಣೋ(ತಾಯಿ) ಗಂಡೋ(ತಂದೆ)? ಈ ಪ್ರಶ್ನೆಯಿಂದ ಒಮ್ಮೆ ನಗು ಬಂದರೆ, ಮತ್ತೊಮ್ಮೆ ಗಂಭೀರವಾಗಿ ಉತ್ತರ ಕೊಡಬೇಕೆನಿಸುತ್ತದೆ. ನೀನು ಚರಾಚರ ವಸ್ತುಗಳಿಗೆಲ್ಲ, ಜೀವಿಗಳು ನಿರ್ಜೀವಿಗಳಿಗೆಲ್ಲ ಉದ್ಭವ ಸ್ಥಾನದಲ್ಲಿರುವಾಗ, ನಮ್ಮ ಲೌಕಿಕ ವ್ಯವಹಾರದ ಸಂಕೇತವಾದ ಹೆಣ್ಣು ಗಂಡು ಎಂಬ ಪ್ರಭೇದವನ್ನು ನಿನ್ನ ಮೇಲೆ ಆರೋಪಿಸುವುದು ಎಷ್ಟು ಸರಿ?

ಆದರೆ ನನಗೆ ನನ್ನ ಪರಿಸರದಲ್ಲಿ ಹಿತವಾಗಿರುವ, ನನ್ನನ್ನು ಈ ಕುಟುಂಬವ್ಯವಸ್ಥೆಯಲ್ಲಿ ಹುಟ್ಟಿಸಿ-ಪಾಲಿಸಿದ ತಂದೆ-ತಾಯಿಯರ ನೆನಪು ಅಮೂಲ್ಯವಾದದ್ದು, ಗೌರವಿಸಬೇಕಾದ್ದು, ಪೂಜಿಸಬೇಕಾದ್ದು. ಹಾಗಾಗಿ ನಿನ್ನನ್ನು ತಂದೆ-ತಾಯಿಗಳ ಸ್ಥಾನದಲ್ಲಿ ನಿಲ್ಲಿಸಿ ನೋಡಿದರೆ ಅದು ತಪ್ಪಾಗುವುದಿಲ್ಲ. ನಾನು ನಿನಗೆ ತೋರಿಸಬೇಕೆಂದಿರುವ ಗೌರವದ ಮತ್ತೊಂದು ರೂಪ ಅದು.

ಹಾಗಾಗಿ ನನಗೆ ನೀನು ತಾಯಿಯಾದರೇನು, ತಂದೆಯಾದರೇನು ಎರಡೂ ಒಂದೇ. ಗೌರವಾರ್ಹನೇ, ಪೂಜಾರ್ಹನೇ. ಬಹುಶಃ ನನ್ನ ಅನುಭವಕ್ಕೆ ಬಂದಂತೆ ನನಗೆ ತಾಯಿಯನ್ನಾಗಲಿ, ತಂದೆಯನ್ನಾಗಲೀ, ಇಬ್ಬರಲ್ಲಿ ಒಬ್ಬರನ್ನು ಹೆಚ್ಚಿಗೆ ಆತ್ಮೀಯವಾಗಿ ಕಾಣುವ ವ್ಯಕ್ತಿತ್ವ ಬೆಳೆದು ಬಂದಿರಬಹುದು. ಅದೇ ನನಗೆ ಪ್ರಿಯವಾಗುತ್ತದೆ. ಕೆಲವೊಮ್ಮೆ ತಂದೆ ತಾಯಿಯರನ್ನು ಜೊತೆಯಾಗಿ ನಿಲ್ಲಿಸಿ ನಿನ್ನನ್ನು ಆನಂದಿಸುತ್ತೇನೆ. ನನಗೆ ಗೊತ್ತು, ನೀನು ಅದನ್ನು ತಪ್ಪಾಗಿ ಭಾವಿಸುವುದಿಲ್ಲ ಎಂದು.

ಅದೂ ಅಲ್ಲದೆ ನನ್ನ ನಿನ್ನ ಸಂಬಂಧವು ಉಳಿದು ಬರಬೇಕಾದರೆ (ನಿನ್ನ ಕಡೆಯಿಂದಲ್ಲ, ನನ್ನ ಕಡೆಯಿಂದ!) ಇಂತಹ ಘನಿಷ್ಠ ಬಂಧನವೂ ಕಾರಣವಾಗುತ್ತದೆ. ನೀನು ಸಾಗರವಾಗಿರುವಾಗ, ನಾನು ನಿನ್ನಲ್ಲಿರುವ ಒಂದು ನೀರಿನ ಕಣವಾಗಿರುವಾಗ, ಆ ನೀರಿನ ಕಣಕ್ಕೆ ನಾನು ಸಾಗರದ ಒಂದು ಚಿಕ್ಕ ಅಂಶ ಎಂದು ಪದೇಪದೇ ನೆನಪಿಸುವ ಅಗತ್ಯಬೀಳುತ್ತದೆ. ಒಂದು ವೇಳೆ ಸೂರ್ಯನ ಶಕ್ತಿಯಿಂದಾಗಿ ಆವಿಯಾಗಿ ಹೋದರೂ, ಮತ್ತೆ ಮೋಡವಾಗಿ, ಮಳೆಯ ಹನಿಯಾಗಿ, ನದಿ ಯಲ್ಲಿ ಹರಿಯುತ್ತಾ ಬಂದು ನಿನ್ನ ಒಡಲನ್ನು ಸೇರುವ ತವಕ ಅದಕ್ಕೆ ಸದಾ ಇರಲಿ.

ಅದೂ ಅಲ್ಲದೆ ಹಿಂದಿನವರು, ಅನುಭವಿಗಳು, ಸಾಧಕರು, ತಿಳಿದವರು ನಿನ್ನ ನಾಮಸ್ಮರಣೆಯನ್ನು ಮಾಡುವ ತವಕವನ್ನು ತಿಳಿಸಿದ್ದಾರೆ. ನಿನ್ನ ನಾಮಸ್ಮರಣೆ ಮಾಡುತ್ತಾ ಎಲ್ಲವನ್ನೂ ಅರ್ಪಿಸುವುದೇ ಮಹಾಭಾಗ್ಯ ಎಂದು ಅವರು ಹೇಳುತ್ತಾರೆ. ಇಂತಹ ಮಹಾಮಹಿಮರ ಮಾತುಗಳನ್ನು ಅಲ್ಲಗಳೆಯುವುದು ಸರಿಯೇ? ಅವರು ಸತತ ಚಿಂತನೆಯ ನಂತರ ಈ ನಿರ್ಧಾರಕ್ಕೆ ಬಂದಿರಬೇಕಾದರೆ ಅದು ಮಹತ್ವದ ಮಾತೇ ಆಗಿರಬೇಕು. ನನ್ನಂತಹ ಏನೂ ಅರಿಯದ ಅಲ್ಪಜ್ಞಾನಿಗೆ ಅವರಿಗೆ ಆಗಿರುವ ಅನುಭವದ ಎಳ್ಳು ಮಾತ್ರ ಅನುಭವವೂ ಆಗಿಲ್ಲ ಎಂಬುದು ಸತ್ಯ. ನಿನ್ನ ನಾಮದ 'ಬಲವೊಂದಿದ್ದರೆ ಸಾಕು' ಎಂದು ದಾಸರು ಹಾಡಿ ಹೊಗಳುತ್ತಾರೆ. ಮಹರ್ಷಿವ್ಯಾಸರು, 'ಸಂಕೀರ್ತ್ಯ ನಾರಾಯಣ ಶಬ್ದ ಮಾತ್ರಂ ವಿಮುಕ್ತ ದುಃಖಾ, ಸುಖಿನೋ ಭವಂತು' ಎಂದು ಹೇಳುತ್ತಾರೆ. ಕುಲಶೇಖರ ಆಳ್ವಾರರು ತಮ್ಮ ಮುಕುಂದ ಮಾಲೆಯಲ್ಲಿ 'ಪ್ರಾಣ ಪ್ರಯಾಣ ಸಮಯೇ ಕಫ ವಾತ ಪಿತ್ತೇ ಕಂಠಾವರೋಧನ' ಉಂಟಾಗಿ ನಿನ್ನ ಹೆಸರು ಬಾಯಿಂದ ಬರದೆ ಹೋದರೆ ಹೇಗೆ ಎಂದು ಚಿಂತೆಯನ್ನು ವ್ಯಕ್ತಪಡಿಸಿದ್ದಾರೆ.

ಅಂತಹ ಮಹತ್ವವಿರುವ ನಿನ್ನ ಹೆಸರು ಬೇಡ ಎನ್ನುವ ಎದೆಗಾರಿಕೆ, ನನಗೆಲ್ಲಿದೆ? ಇದು ಕಾಟಾಚಾರದ ನಂಬಿಕೆಯ ಮಾತು ಎಂದು ಹೇಳುವುದು ಸರಿಯಲ್ಲ. ಯಾರ ಹೆಸರನ್ನು ನೆನಪಿಸಿಕೊಳ್ಳುವುದರಿಂದ ನನ್ನ ವ್ಯಕ್ತಿತ್ವದಲ್ಲಿ ಬದಲಾವಣೆಯಾಗುತ್ತದೋ, ನನ್ನ ಮನಸ್ಸಿಗೆ ಅತೀವ ಶಾಂತಿ ಲಭಿಸುತ್ತದೊ, ಇನ್ನಿತರ ಲೌಕಿಕ ಜಂಜಾಟಗಳಿಂದ ಮುಕ್ತಿ ದೊರೆಯುತ್ತದೊ, ಅಂತಹ ಹೆಸರನ್ನು 'ನಂಬಿಕೆ'

ಎಂದು ಹೇಳಿ ಕೈತೊಳೆದುಕೊಳ್ಳುವುದು ಎಷ್ಟು ಮಾತ್ರಕ್ಕೆ ಸರಿ?

ಹಾಗೆ ನೋಡಿದರೆ ಈಗಿನ ಆಧುನಿಕ ವೈದ್ಯಕೀಯ ಪ್ರಪಂಚವೇ ಇಂತಹ ಒಂದು ನಂಬಿಕೆಗೆ ಮಹತ್ತರ ಅರ್ಥವನ್ನು ನೀಡಿದೆ. ನಂಬಿಕೆಯಿಂದ ಏನು ಬೇಕಾದರೂ ಸಾಧಿಸಬಹುದು ಎಂದು ವೈದ್ಯರು ಹೇಳಲು ಆರಂಭಿಸಿದ್ದಾರೆ. ಒಬ್ಬ ಮರಣಾಸನ್ನ ರೋಗಿಯ ಕಥೆಯನ್ನೆ ನಮ್ಮ ವೈದ್ಯ ಮಿತ್ರರು ಹೇಳುತ್ತಿರುತ್ತಾರೆ. ಆಕೆ ತನ್ನ ಸಾವು ಹತ್ತಿರವಿದೆ ಎಂದು ತಿಳಿದೂ, 'ನಾನು ಈಗಲೇ ಹೇಗೆ ಸಾಯಲಿ? ನನ್ನ ಪತಿಯನ್ನು ನೋಡಿಕೊಳ್ಳುವವರು ಯಾರು? ಆತ ಅನಾಥನಾಗಿಬಿಡುವುದಿಲ್ಲವೇ?' ಎಂದು ಹೇಳುತ್ತಾ ವೈದ್ಯರು ಹದಿನೈದು ದಿವಸದಲ್ಲಿ ಸಾಯುತ್ತಾಳೆ ಎಂದವಳೆ, ಹತ್ತು ವರ್ಷಕ್ಕೂ ಮಿಗಿಲಾಗಿ ಬಾಳೀ ತನ್ನ ಗಂಡ ತೀರಿದ ಒಂದು ತಿಂಗಳ ನಂತರ ಸಾವನ್ನಪ್ಪಿದ್ದಳು.

ಅಂದರೆ ಒಂದು ಸಾಧಾರಣ ನಂಬಿಕೆಯೇ ಜೀವಿಸಲು ಬಲವಾದ ಕಾರಣವಾಗುತ್ತದೆ ಎಂಬುದನ್ನು ಇಂದಿನ ವೈದ್ಯಕೀಯ ಕ್ಷೇತ್ರ ಒಪ್ಪಿಗೊಂಡಿದೆ. ಇದು ಭೌತಿಕ ದೇಹದ ವಿಷಯವಾಯಿತು, ಲೌಕಿಕ ಸಂಬಂಧಗಳ ವಿಷಯವಾಯಿತು. ಆದರೆ ನನ್ನ ನಿನ್ನ ಸಂಬಂಧ ಇದನ್ನು ಮೀರಿ ನಿಂತಿರುವುದು. ಇಲ್ಲಿ ಎಲ್ಲವೂ ಅಲೌಕಿಕ. ಅದಕ್ಕೆ ಇದನ್ನು ಆಧ್ಯಾತ್ಮಿಕ ಎಂದು ಬಿಡುತ್ತೇವೆ. ನನ್ನ ದೇಹದ ಮಾತೇ ಬರದ, ಕೇವಲ ನನ್ನ ಆತ್ಮ ಹಾಗೂ ನನ್ನ ಆತ್ಮನಂತಹ ಅನಂತ ಆತ್ಮಗಳ ಕಾರಣೀಭೂತನಾದ ನಿನ್ನ, ಪರಮಾತ್ಮ ಎಂದು ಕರೆಸಿಕೊಳ್ಳುವ, ಪರಬ್ರಹ್ಮ ಸ್ವರೂಪಿ ಎಂದು ಆಧ್ಯಾತ್ಮಿಗಳು ಕರೆಯುವ ನಮ್ಮಿಬ್ಬರ ನಡುವಿನ ಸಂಬಂಧದ ಮಾತು ಮಾತ್ರ ಬರುತ್ತದೆ.

ಈ ಸಂಬಂಧಕ್ಕಾಗಿಯಾದರೂ ನನಗೆ ನಿನ್ನ ಹೆಸರು ಬೇಕು. ನಾನು ಪದೇ ಪದೇ ನೆನಪಿಸಿಕೊಳ್ಳಲು ನಿನ್ನ ಹೆಸರು ಬೇಕು. ನಾನು ಯಾರು ಎಂದು ನನ್ನನ್ನು ಎಚ್ಚರಿಸಿಕೊಳ್ಳಲೂ ನಿನ್ನ ಹೆಸರು ಬೇಕು.

ತಪ್ಪು ಒಪ್ಪು

ಕಾಲ ಕಳೆದಂತೆ, ಹಿಂತಿರುಗಿ ನೋಡಿದಾಗ ಜೀವನದುದ್ದಕ್ಕೂ ನಾನು ಮಾಡಿದ್ದ ತಪ್ಪುಗಳು ಎದ್ದು ಕಾಣುತ್ತವೆ. ಇಂತಹ ತಪ್ಪುಗಳನ್ನು ಮಾಡಿದಾಗ ನನಗೆ ಚಿಕ್ಕ ವಯಸ್ಸಾಗಿತ್ತು, ದೇಹದಲ್ಲಿ ಬಿಸಿರಕ್ತ ಓಡುತ್ತಿತ್ತು. ಮಾನಸಿಕವಾಗಿ ಪಕ್ವವಾಗಿರಲಿಲ್ಲ, ಎಂದೆಲ್ಲಾ ಹೇಳಿ ನಿನ್ನಿಂದ ಕ್ಷಮೆಯನ್ನು ಯಾಚಿಸಬಹುದೋ ಏನೋ.

ಆದರೆ ಎಷ್ಟೋ ಮಂದಿಗೆ ಅವರು ಚಿಕ್ಕವರಾಗಿದ್ದಾಗಲೇ ತಪ್ಪು ಒಪ್ಪಿನ ನಡುವಿನ ಅಂತರ ತಿಳಿದಿರುವಂತೆ ಪ್ರಜ್ಞೆಯನ್ನು ಕರುಣಿಸಿರುತ್ತೀಯ. ಚಿಕ್ಕವರಾಗಿದ್ದರೂ ಪಕ್ವವಾದ ನಡವಳಿಕೆಯಿಂದ ತಮ್ಮ ಜೀವನದ ಹಂತಗಳನ್ನು ಬಹಳ ಸೊಗಸಾಗಿ ಇವರು ಹತ್ತಿರವುದನ್ನು ನಾನು ಕಾಣುತ್ತೇನೆ. ಅದೇ ನನ್ನದೇ ಜೀವನದಲ್ಲಿ ಎಷ್ಟು ತಪ್ಪುಗಳನ್ನು ಮಾಡಿದ್ದೇನೆ ಎಂದರೆ ನನಗೇ ಅಚ್ಚರಿಯಾಗುತ್ತದೆ–ನಾನು ಇನ್ನೂ ಒಂದು ಚೇತನವಾಗಿ ಉಳಿದಿದ್ದೇನಲ್ಲ ಎಂದು.

ಹಾಗೆ ಯೋಚಿಸಿದಾಗ ನನಗೆ ನಿನ್ನ ಕರುಣೆಯ ಅರ್ಥವಾಗುತ್ತದೆ. ನಾನು

ತಪ್ಪು ಮಾಡುತ್ತಿದ್ದಾಗಲೂ, ಆ ತಪ್ಪುಗಳನ್ನು ಬೃಹದಾಕಾರವಾಗಿ ತೋರದೆ, ಆ ತಪ್ಪುಗಳಿಂದ ನನ್ನ ಬಾಳಿಗೆ ಆಘಾತವಾಗದಂತೆ, ಕುಡಿದ ವ್ಯಕ್ತಿ ತೂರಾಡುತ್ತಾ ನಡೆಯುವಂತೆ ನಡೆಯುತ್ತಿದ್ದರೂ, ಗುರಿಯನ್ನು ದೂರ ಸರಿಸದೆ, ಜೀವನದ ಧ್ಯೇಯ ಏನು ಎಂಬುದನ್ನು ತಿಳಿಸುತ್ತಾ ನನ್ನ ಕೈಯನ್ನು ಹಿಡಿದು ನಡೆಸುತ್ತಾ ಬಂದಿರುವುದು ನಿನ್ನ ಕರುಣೆಯ ಅಪಾರತೆಯ ಸಂಕೇತವೇ ಸೈ. ತಪ್ಪು ಮಾಡುವ ಎಳೆಯ ಬಾಲಕನನ್ನು ಎಚ್ಚರಿಸಿದ್ದೀಯ? ಈ ದೇಹಕ್ಕೆ, ಈ ಆತ್ಮಕ್ಕೆ, ಈ ಮನಸ್ಸಿಗೆ ಉಂಟಾಗಬಹುದಾದ ಘಾತಗಳನ್ನು ಬಹುಶಃ ನಿನ್ನ ಮೇಲೆ ಎಳೆದುಕೊಂಡಿದ್ದೀಯೊ ಏನೋ? ಅವು ನನಗೆ ಕಾಣಲಿಲ್ಲ ಎಂದರೆ, ನೀನು ಹಾಕಿರುವ ನಿಯಮಗಳಂತೆ ಬೇರೆಯಾರನ್ನಾದರೂ ತಾಗಿರಬೇಕಲ್ಲ. ಅಂತಹ ಪೆಟ್ಟುಗಳನ್ನು ನೀನೇ ಸಹಿಸಿರ ಬೇಕು ಎಂಬ ಅನುಮಾನ ನನ್ನದು. ಇದರಿಂದ ಅದೆಷ್ಟು ಬಾರಿ ನಿನಗೆ ತೊಂದರೆಯಾಗಿದೆಯೋ?

ತಿಳಿದವರು ಹೇಳುತ್ತಾರೆ- ಕಾಯಾ, ವಾಚಾ, ಮನಸಾ ಶುದ್ಧನಾದಾಗ ನಿನ್ನ ದರ್ಶನವಾಗುತ್ತದೆ ಅಂತ. ಈ ಕಾಯವಾದರೋ ಉತ್ತಮ ಕೆಲಸ ಮಾಡುವುದಕ್ಕೆಂದೇ ನಿರ್ಮಿತವಾಗಿದ್ದರೂ, ಅದಕ್ಕೆ ನೀಚ ಕೆಲಸ ಮಾಡುವುದೆಂದರೆ ಅದೇನೋ ಉತ್ಸಾಹ. ಹಾಗೆ ನೋಡಿದರೆ ಕಾಯಕ್ಕೆ ತನ್ನದೇ ಆದ ಗುಣಗಳು ಇರುವ ಹಾಗೆ ಕಾಣೆ. ಹಾಂ, ಅದಕ್ಕೆ ನೇಮಿಸಿರುವ ಕೆಲಸಗಳನ್ನು ಅದು ಮಾಡುತ್ತಿರುತ್ತದೆ. ಆದರೆ ಹೆಚ್ಚಿನ ಪಾಲು ಮನಸ್ಸಿನಿಂದ ಅದು ಪ್ರಚೋದಿತವಾಗುತ್ತದೆ. ಮನಸ್ಸನ್ನು ತಿಳಿದವರು ಅದಕ್ಕೇ ಮರ್ಕಟ ಎಂದು ಹೇಳುತ್ತಾರೆ. ಅದಕ್ಕೆ ಸ್ಥಿರತೆಯಿಲ್ಲ. ಅಷ್ಟೇ ಅಲ್ಲ, ಕಾಯದ ವಿವಿಧ ಅಂಗಗಳನ್ನು ತಿರುಚಿರುವುದರಲ್ಲಿ ಮನಸ್ಸಿಗೆ ಏನೋ ಆನಂದ.

ಆನಂದ ಎಂಬ ಪದವನ್ನು ಉಪಯೋಗಿಸದೆನಾದರೂ ಮನಸ್ಸಿನ ಪ್ರಚೋದನೆಯಿಂದ ಕಾಯವು, ಮಾತನಾಡುವ ನಾಲಿಗೆಯು ಮಾಡುವ ಕೆಲಸಗಳು ಆನಂದಮಯವಾದವು ಎಂದು ನನಗೆ ಅನಿಸುವುದಿಲ್ಲ. ಅದೊಂದು ರೀತಿಯ ಚೇಷ್ಟೆ ಮಾಡುವ ಮಗುವು ಪಡೆಯುವ ಖುಷಿಯ ಭಾವ ಅಷ್ಟೇ. ತನ್ನ ಚೇಷ್ಟೆಯಿಂದ ಯಾರಾದರೂ ಜಾರಿ ಬಿದ್ದರೆ ಕೈ ಚಪ್ಪಾಳೆ ತಟ್ಟಿ ಪಡುವ ಖುಷಿ. ಅದರಲ್ಲಿ ಕೀಟಲೆ ಸ್ವಭಾವ ಬಿಟ್ಟು ಬೇರೇನೂ ಇಲ್ಲ.

ಇದು ಹಿಗೇಕೆ? ನಾನು ಹುಟ್ಟಿದಾಗ, ನಾನು ಹುಟ್ಟಿದ ಪರಿಸರದಲ್ಲಿ ಒಂದು ಸಂಸ್ಕಾರವಿತ್ತು. ಆ ಸಂಸ್ಕಾರ ನನ್ನ ಮೇಲೆ ಅತಿ ಗಾಢವಾದ ಪರಿಣಾಮ ಬೀರುತ್ತಿತ್ತು. ನಾನು ಆಲೋಚಿಸುವ ರೀತಿ, ಈ ಆಲೋಚನೆಗಳಿಂದಾಗಿ ನನ್ನ ದೇಹದ ಮೇಲೆ ಆಗುತ್ತಿದ್ದ ಪರಿಣಾಮ, ನಾನು ಆಡುವ ಮಾತಿನ ಮೇಲೆ ಆಗುತ್ತಿದ್ದ ಪರಿಣಾಮ ಇದೆಲ್ಲ ಈ ಸಂಸ್ಕಾರದ ಪ್ರಭಾವ.

ಒಂದು ದೃಷ್ಟಿಯಲ್ಲಿ ಇದು ನನ್ನನ್ನು ತನ್ನ ಹಿಡಿತದಲ್ಲಿ ತೆಗೆದುಕೊಂಡಿತ್ತು. ನಾನು ಮೂಲತಃ ಏನು ಎಂಬುದನ್ನು ತಿಳಿಯದೆ, ಈ ಪರಿಸರದ ಸಂಸ್ಕಾರ ಪ್ರಭಾವದಲ್ಲಿ, ಛಾಯೆಯಲ್ಲಿ ಬಹಳ ದೂರ ನಡೆದು ಬಿಟ್ಟೆ. ಹಾಗಾಗಿ ಕಾಯಾ, ವಾಚಾ, ಮನಸಾ ನಿನ್ನ ಬಗ್ಗೆ ಶುದ್ಧನಾಗಿ ತೀರ್ಮಾನ ತೆಗೆದುಕೊಳ್ಳಲು ಆಗಲೇ ಇಲ್ಲ. ಎಷ್ಟೋ ವರ್ಷ ಕಳೆದ ನಂತರ, ಪರಿಸರದ ಸಂಸ್ಕಾರವು ಹೊಣೆಯಾಗಿದೆ ಎಂದು ಅರಿತಾಗ, ಅದನ್ನು ಕಿತ್ತೆಸೆಯುವ ಪ್ರಯತ್ನ ಮಾಡಿದಾಗ, ಸಣ್ಣದಾಗಿ ನಿನ್ನ

ಜ್ಯೋತಿಯ ದರ್ಶನವಾಯಿತು. ಇಷ್ಟು ದಿನಗಳ ಕಾಲ ವ್ಯರ್ಥವಾಗಿ ಕಳೆದನಲ್ಲ ಎಂಬ ನೋವು ಮನಸ್ಸಿಗೆ ಆದರೂ, ಈಗಲೂ ಶುದ್ಧನಾಗಿ ನಿನ್ನನ್ನೇ ನೋಡುತ್ತಾ ಇರಬೇಕು ಎಂಬ ಪ್ರಯತ್ನವು ಅಷ್ಟು ಸಫಲವಾಗುವುದಿಲ್ಲ. ಮನವೆಂಬ ಮರ್ಕಟ ಅಂತಹ ಪ್ರಯತ್ನವನ್ನು ಆಗಗೊಡುವುದಿಲ್ಲ. ಹಾಗಾಗಿ ನಿನ್ನನ್ನು ಸತತವಾಗಿ ಕಾಣುವ ಬಯಕೆ ಉತ್ಕಟವಾಗಿದ್ದರೂ, ನಿನ್ನನ್ನು ಬೆಳಕಿನ ಕಿರಣವಾಗಿ ಆಗಾಗ್ಗೆ ಮಾತ್ರ ನೋಡಲು ಸಾಧ್ಯವಾಗಿದೆ. ಆಗೆಲ್ಲಾ ನಿಜವಾಗಿ ಸಂತೋಷವಾಗಿದೆ.

ತಪ್ಪಾಗಿದೆ ಎಂದು ಅರಿಯುವ ಮನಸ್ಸು ಬಂದಿದೆಯಲ್ಲ, ಅದೇ ಸಂತೋಷ. ಹಾಗೆಂದು ಅದನ್ನು ನೆನಪಿಸಿಕೊಳ್ಳುತ್ತಾ ದುಃಖಿಸುವುದರಲ್ಲಿ ಅರ್ಥವಿಲ್ಲ, ಅಲ್ಲವೇ? ಜೊತೆಗೆ ನಿನ್ನ ಕರುಣೆಯಿಂದ ನಿನಗೆ ನಾನು ಒಪ್ಪಿಗೆಯಾದೆ ಎಂಬುದು ಮುಖ್ಯ.

ನಿವೇದನೆ

ಸಾಗರದ ಬಿಂದುವಿನಂತೆ ನಾನು ನಿನ್ನ ರೂಪವೇ ಎಂಬ ಅರಿವು ಸದಾ ಇರಲಿ;

ವಿಶ್ವದಲ್ಲಿ ಇರುವ ಸಮಸ್ತ ಚರಾಚರ ವಸ್ತುಗಳು, ಕಾಣಲಾಗುವ ಕಾಣಲಾಗದ ಶಕ್ತಿಗಳು ನೀನೇ ಎಂಬ ಅರವು ಸದಾ ಇರಲಿ;

ನನ್ನ ಬೆನ್ನ ಹಿಂದೆ ಸದಾ ನೀನಿದ್ದೀಯ, ಕಷ್ಟಕಾಲದಲ್ಲೂ ನೀನು ನನ್ನ ಜೊತೆಗಿದ್ದೀಯ ಎಂಬ ಅರಿವು ಸದಾ ನನಗಿರಲಿ;

ಈ ನೆಲದ ಮೇಲೆ ಹುಟ್ಟಿ ತಪ್ಪು-ಒಪ್ಪುಗಳ ಜಾಲದಲ್ಲಿ ಸಿಕ್ಕಿದ್ದೇನಾದರೂ, ಅದು ನನ್ನ ಮೇಲೆ ಪ್ರಭಾವ ಬೀರದಿರಲಿ, ಅಂತಹ ಕೃಪೆ ನಿನ್ನದಿರಲಿ;

ಮಿತಿಯೊಳಗೆ ಕಟ್ಟಿಹಾಕಿರುವ ಈ ದೇಹದ ಅನುಭವಗಳಿಂದ ಸೀಮೋಲ್ಲಂಘನೆ ಮಾಡುವ ಶಕ್ತಿ ನಿನ್ನಿಂದ ದೊರಕಲಿ;

ವ್ಯಾವಹಾರಿಕ ಜಗತ್ತು ಹಂತ ಹಂತವಾಗಿ ಮೇಲೆ ಹತ್ತಿ ನಿನ್ನನ್ನು ಪಡೆಯುವ ಸಾಧನವಾಗಲಿ, ಅದು ಗೋಡೆಯಾಗದಿರಲಿ;

ಏನೇ ಮಾಡುತ್ತಿದ್ದರೂ ದೃಷ್ಟಿ ನಿನ್ನ ಕಡೆಯೇ ಇರಲಿ.

* * *

ಖಾದಿ ಹಿಂದಿರುವ ತರ್ಕಶಾಸ್ತ್ರ

– ಗುರುದಯಾಳ್ ಮಲ್ಲಿಕ್

ಪ್ರತಿಯೊಂದು ದೇಶವೂ ತನ್ನದೇ ಆದ ಜೀವನ ತರ್ಕಶಾಸ್ತ್ರ ಹೊಂದಿರುತ್ತದೆ. ಅನೇಕ ಬಾರಿ ಆ ತರ್ಕಶಸ್ತ್ರ ಒಂದು ಸಂಕೇತವಾಗಿ ಮೂರ್ತಗೊಂಡಿರುತ್ತದೆ. ಅಂಥ ತರ್ಕಶಾಸ್ತ್ರಗಳ ಸರಣಿಯೇ ಇದೆ. ಅಗ್ನಿ ತರ್ಕಶಾಸ್ತ್ರ, ಕೊಳಲ ತರ್ಕಶಾಸ್ತ್ರ, ಕಮಲ ತರ್ಕಶಾಸ್ತ್ರ, ಶಿಲುಬೆ ತರ್ಕಶಾಸ್ತ್ರ, ಬಾಲಚಂದ್ರ ತರ್ಕಶಾಸ್ತ್ರ, ಈ ಎಲ್ಲ ವಿಧ ತರ್ಕಶಾಸ್ತ್ರಗಳಲ್ಲಿ ಸಮಾನವಾದ ದೃಷ್ಟಿಕೋನವೊಂದಿದೆ. ಅದು ವೃತ್ತಾಕಾರದ ಸರಳತೆ. ಜೀವನದ ಈ ತರ್ಕಶಾಸ್ತ್ರದ ಅಂಶವೇ ಖಾದಿಯ ತರ್ಕಶಾಸ್ತ್ರ. ಆಧುನಿಕ ಯುಗದಲ್ಲಿ ವಿಶೇಷವಾದ ಈ ತರ್ಕಶಾಸ್ತ್ರದ ವ್ಯಖ್ಯಾನಕಾರರಾಗಿ ಮತ್ತು ಮಾದರಿಯಾಗಿ ಗಾಂಧೀಜಿ ಇದ್ದರು. ತಮ್ಮ ಕಾಲದಲ್ಲಿದ್ದ ಒತ್ತಡ, ಸಂಕೀರ್ಣತೆ ಮತ್ತು ಗೊಂದಲಗಳು ಈ ಜೀವನ ತರ್ಕಶಾಸ್ತ್ರವನ್ನು ಪ್ರತಿಪಾದಿಸುವಂತೆ ಮಾಡಿದವು ಮುಂದೆ ಗಾಂಧೀಜಿ ಆ ಶಾಸ್ತ್ರದೊಂದಿಗೆ ಸಮರಸಗೊಂಡರಷ್ಟೇ ಅಲ್ಲ ಅದು ಅವರ ಜೀವನದುಸಿರೇ ಆಯಿತು. ಖಾದಿ ಏನನ್ನು ಕುರಿತು ಉದ್ದೇಶಿಸುತ್ತದೆ? ಈ ಪ್ರಶ್ನೆಗೆ ಉತ್ತರ ಪಡೆಯುವ ಶ್ರೇಷ್ಠ ಕ್ರಮವೇನೆಂದರೆ ಖಾದಿ ಏನೆಲ್ಲವನ್ನು ಸಂಕೇತಿಸುವುದಿಲ್ಲವೆಂಬುದನ್ನು ಮೊಟ್ಟಮೊದಲು ಮನಸ್ಸಿನಿಂದ ತೊಡೆದುಹಾಕಬೇಕು. ನಿಜವಾದ ಖಾದಿ ನಿರ್ದಿಷ್ಟವಾದ ಕೆಲವು ಮೌಲ್ಯಗಳನ್ನು ಪ್ರತಿನಿಧಿಸುತ್ತದೆ. ಮೊದಲನೆಯದು, ತನ್ನ ಸ್ವಧರ್ಮಾಚರಣೆಗೆ ಅಗತ್ಯವಾಗಿರುವಷ್ಟು ಪದಾರ್ಥಗಳನ್ನು ಮಾತ್ರ ಹೊಂದಿರಬೇಕು; ಎರಡನೆಯದಾಗಿ, ಆದಾಯದ ಬೇರೆ ಮೂಲಗಳಿದ್ದರೂ ಪ್ರಾಮಾಣಿಕ ದುಡಿಮೆಯ ಶ್ರಮದ ಬೆವರಿನಿಂದ ತನಗೆ ಬೇಕಾದ ಅನ್ನವನ್ನು ಪಡೆಯಬೇಕು; ಮೂರನೆಯದಾಗಿ, ಬೌದ್ಧಿಕ ಪ್ರಾಮಾಣಿಕತೆ, ನಾಲ್ಕನೆಯದಾಗಿ; ಪರಿಶುದ್ಧ ಆಧ್ಯಾತ್ಮಿಕತೆ ಮತ್ತು ಐದನೆಯದಾಗಿ ಬಾಹ್ಯ ಪ್ರಪಂಚದಲ್ಲಿ ಎಷ್ಟೇ ವೈರುಧ್ಯಗಳಿದ್ದರೂ ಭಗವಂತನ ಪರಿಪೂರ್ಣ ನ್ಯಾಯದಲ್ಲಿ ಅಚಲ ವಿಶ್ವಾಸ. ಈಗ ಈ ಆದರ್ಶಗಳನ್ನು ಕೊನೆಯಿಲ್ಲದ ಪ್ರಯತ್ನದ ಮೂಲಕ ಪ್ರಕಟ ಪಡಿಸುವುದೇ ಗಾಂಧೀಜಿಯವರ ಜೀವನ ವಿಧಾನವಾಗಿತ್ತು. ಬಟ್ಟೆ ಇಡುವ ಕಪಾಟು ಅವರಿಗಿರಲಿಲ್ಲ, ಬ್ಯಾಂಕ್‌ನಲ್ಲಿ ಯಾವ ಹಣವೂ ಇರಲಿಲ್ಲ. ನೂಲುವ ರಾಟೆಯನ್ನು ಮಾತ್ರ ಹೊಂದಿದ್ದರು. ಗಾಂಧೀಜಿಯವರ ಪ್ರಾಮಾಣಿಕತೆ ಗಾದೆ ಮಾತಿನಂತೆಯೇ ಇತ್ತು. ಆದರೆ ಅನೇಕ ಬಾರಿ ಜನರು ಅವರಿಗೆ ದುಃಖವನ್ನುಂಟು ಮಾಡುವಷ್ಟರ ಮಟ್ಟಿಗೆ ತಪ್ಪು ಗ್ರಹಿಕೆಯಿಂದ ಅನ್ಯಾಯ ಮಾಡುತ್ತಿದ್ದರು. ಗಾಂಧೀಜಿಯವರ ನಿನ್ನೆಯ ಹೇಳಿಕೆ ಅಥವಾ ಕೃತಿ ಮತ್ತು ಇಂದಿನ ಹೇಳಿಕೆ ಅಥವಾ ಕೃತಿಯ ಮಧ್ಯದಲ್ಲಿ ವ್ಯತ್ಯಾಸವನ್ನು 'ವೈರುಧ್ಯವೆಂದು ಜನರು ತಪ್ಪಾಗಿ' ಕರೆಯುತ್ತಿದ್ದರು. ಆದರೆ ಸತ್ಯದ ಪ್ರಯೋಗಾಲಯದಲ್ಲಿ ಅವರು ಸತತವಾಗಿ ನಡೆಸುತ್ತಿದ್ದ ಪ್ರಯೋಗದ ಸಮಯದಲ್ಲಿ ನಿನ್ನೆಯ ಸತ್ಯಕ್ಕೆ ಹೊಸದಾಗಿ ಸೇರಿದ ಮಾಹಿತಿಯಿಂದ ಕಂಡುಕೊಂಡ ಸತ್ಯವನ್ನು ಅವರು ಪ್ರತಿಪಾದಿಸುತ್ತಿದ್ದರು. ಅವರ ರಾಮ ಅಯೋಧ್ಯೆಯ ಮತ್ತು ಹಿಂದೂಗಳ ರಾಮಚಂದ್ರನಾಗಿರಲಿಲ್ಲ ಅವರ

ರಾಮ ಎಲ್ಲರ ರಾಮ; ಎಲ್ಲರಿಗಾಗಿ ಇರುವ ಮತ್ತು ಎಲ್ಲರಲ್ಲಿಯೂ ಇರುವ ರಾಮ. ತಮ್ಮಸುತ್ತ ಒಳ್ಳೆಯದಲ್ಲದ ಸಂಗತಿಗಳು ನಡೆಯುತ್ತಿದ್ದರೂ ಸದಾಚಾರದ ಪ್ರೇರಣೆಯ ಸದ್ವಿಚಾರದಲ್ಲಿ ಅವರಿಗಿದ್ದ ನಂಬಿಕೆ. 'ಎಲ್ಲೆಲ್ಲಿಯೂ ವಾಸುದೇವನಿದ್ದಾನೆ' ಎಂದು ಘೋಷಿಸುವಷ್ಟರ ಮಟ್ಟಿಗೆ ಅವರ ನಂಬಿಕೆ ದೃಢವಾಗಿತ್ತು.

ಒಮ್ಮೆ ಭಾರತದ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಸೈದ್ಧಾಂತಿಕ ಪ್ರೇರಣೆಯಿಂದಾಗಿ 'ಖಾದಿ ನಮ್ಮ ಸ್ವಾತಂತ್ರ್ಯದ ಪ್ರಾಣ ಶಕ್ತಿ' ಎಂದು ವರ್ಣಿಸಿದ್ದರು. ಆದರೆ ಆ ಪ್ರಾಣಶಕ್ತಿ ಇಂದು ಸಹೋದರ-ಸಹೋದರಿಯರ ರಕ್ತದಿಂದ ಕಲಂಕಿತವಾಗಿದೆ. ಖಾದಿಯನ್ನು ಸಮಾಜ ಸೇವೆಯಲ್ಲಿ ತೊಡಗಿದ ಸರಳ ಪ್ರಾಮಾಣಿಕ, ಕಠಿಣ, ಶ್ರಮದಾಯಕ, ಆಧ್ಯಾತ್ಮಿಕ, ಪರಿಶುದ್ಧ ಜೀವನದ ಪ್ರಾಣಶಕ್ತಿಯೆಂದೂ ಕರೆಯಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ ಖಾದಿ ಬದುಕಿನ ಪ್ರಾಣ ಶಕ್ತಿಯಾಗಿದೆ.

ನಮ್ಮ ಕೃತ್ರಿಮ, ಚಾಲಾಕುತನ ಪ್ರೀತಿಸುವ, ಜಂಬದ, ಯಾಂತ್ರಿಕ ಮತ್ತು ಹಣದ ಹುಚ್ಚಿನ ನಾಗರಿಕತೆ ಇಂದಲ್ಲ ನಾಳೆ ಬದಲಾಗಲೇಬೇಕು. ಆಗ ಮಾನವಕುಲದ ವ್ಯಕ್ತಿಗತ ಮತ್ತು ಸಾಮುದಾಯಕಜಟಿಲತೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಖಾದಿ ತರ್ಕಶಾಸ್ತ್ರವನ್ನು ಶ್ರದ್ಧಾ ಪೂರ್ವಕವಾಗಿ ಮತ್ತು ಬುದ್ಧಿ ಪೂರ್ವಕವಾಗಿ ಸ್ವೀಕರಿಸುವ ಗಳಿಗೆ ಕೂಡಿ ಬರುವುದು.

ಒಟ್ಟಿನಲ್ಲಿ ಖಾದಿ ತರ್ಕಶಾಸ್ತ್ರ ಜೀವನತರ್ಕಶಾಸ್ತ್ರವೇ ಆಗಿದೆ.

ಅನುವಾದ-ಸು.ಕೌ

* * *

ಸಂತಾಪ

ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಇತರ ರಾಜ್ಯಗಳಲ್ಲಿಯ ಲಕ್ಷಾವಧಿ ಆಸ್ತಿಕರ ಭಕ್ತಿಗೆ ನೀರೆರೆದ, ಕರುಣಾಳುಗಳಾಗಿದ್ದ, ನಡೆದಾಡುವ ಶ್ರೀ ರಾಘವೇಂದ್ರರೆಂದು ಪ್ರಸಿದ್ಧರಾಗಿದ್ದ ಸ್ವಾಮಿ ಸುಶಮೀಂದ್ರತೀರ್ಥರು ತಮ್ಮ ೮೩ನೇ ವಯಸ್ಸಿನಲ್ಲಿ ೧೧-೪-೨೦೧೯ರಂದು ನಿಧನರಾದರು. ಅವರಿಗೆ ಜನಪದ ವಿಚಾರ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

* * *

ಕರ್ನಾಟಕದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಲೋಕ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರು, ಶೈಕ್ಷಣಿಕ ಸಂಸ್ಥೆಗಳ ಸಂಸ್ಥಾಪಕರು, ಪ್ರಾಮಾಣಿಕ ರಾಜಕಾರಣಿಗಳೂ ಆಗಿದ್ದ ಶ್ರೀ ಹಾರ್ನಹಳ್ಳಿ ರಾಮಸ್ವಾಮಿಯವರ ನಿಧನಕ್ಕೆ ಜನಪದ ವಿಚಾರ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

* * *

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಶಾಸಕರಾಗಿ, ಕನ್ನಡ ಪರ ಹೋರಾಟಗಾರರಾಗಿ, ಗಾಂಧೀ ವಿಚಾರ ಚಿಂತಕರಾಗಿ ವಿವಿಧ ರೀತಿಯಲ್ಲಿ ನಾಡಿಗೆ ಸೇವೆ ಸಲ್ಲಿಸಿದ್ದ ಬಿ.ಎಂ.ಇದಿನಬ್ಬರವರು ೧೧-೪-೨೦೧೯ರಂದು ನಿಧನರಾದರು. ಅವರಿಗೆ ಜನಪದ ವಿಚಾರ ತನ್ನ ಶ್ರದ್ಧಾಂಜಲಿ ಅರ್ಪಿಸುತ್ತದೆ.

ವೇದದಲ್ಲಿಯ ಮುತ್ತುಗಳು

– ವಿನೋಬಾ

ಅಜ್ಯೇಷ್ಠಾಸೋ ಅಕನಿಷ್ಠಾಸಃ

ಪ್ರಪಂಚದಲ್ಲಿ ಎಷ್ಟೋ ನಗರಗಳು ಆಗಿ ಹೋದವು. ರೋಮ್ ಬಂತು, ಹೋಯಿತು; ಅಥೆನ್ಸ್ ಬಂತು, ಹೋಯಿತು; ವಿಜಯನಗರ ಬಂತು, ಹೋಯಿತು. ಈ ನಗರಗಳ ಪತ್ತೆಯೇ ಇಲ್ಲ. ಆದರೆ ಮನುಷ್ಯನ ಸ್ಮೃತಿಯಲ್ಲಿ ಗೋಕುಲ ಶಾಶ್ವತವಾಗಿದೆ. ಏಕೆಂದರೆ ಅದು ಒಂದು ಆದರ್ಶ ಗ್ರಾಮವಾಗಿತ್ತು. ಅಲ್ಲಿ ಎಲ್ಲರೂ ಅಣ್ಣ ತಮ್ಮಂದಿರಂತೆ ಇರುತ್ತಿದ್ದರು. ಮಕ್ಕಳಿಗೆಲ್ಲರಿಗೂ ತಿನ್ನಲು ಬೆಣ್ಣೆ ಸಿಗುತ್ತಿತ್ತು. ಅಣ್ಣತಮ್ಮಂದಿರಂತೆ ಇರುವುದನ್ನು ಕೂಡ ವೇದ ಸಹಿಸುವುದಿಲ್ಲ! ಏಕೆಂದರೆ ಅಣ್ಣತಮ್ಮಂದಿರಲ್ಲಿ ಕೂಡ ಒಬ್ಬ ದೊಡ್ಡವನಾದರೆ ಇನ್ನೊಬ್ಬ ಚಿಕ್ಕವನಾಗಿರುತ್ತಾನೆ. ವೇದ ಹೇಳುತ್ತದೆ, ***"ಅಜ್ಯೇಷ್ಠಾಸೊ ಅಕನಿಷ್ಠಾಸ ಏತೆ ಸಂ ಭ್ರಾತರೊ ವಾವೃಧುಃ ಸೌಭಾಗ್ಯ" (೫.೪.೪)*** – ನಮ್ಮಲ್ಲಿ ಯಾರೂ ಚಿಕ್ಕವರೆಂದಾಗಲೀ ದೊಡ್ಡವರೆಂದಾಗಲೀ ಇರದಂತೆ ನಾವು ಸಹೋದರರಾಗುವೆವು. ಒಂದು ಮಂತ್ರದಲ್ಲಿಯಂತು ಇನ್ನೊಂದು ಮಾತನ್ನೂ ಸೇರಿಸಲಾಗಿದೆ. **ಅಮಧ್ಯಮಃ** ಅಂದರೆ ಯಾವ ಸಮೂಹದಲ್ಲೂ ಮಧ್ಯಮರು ಇಲ್ಲ. ಒಟ್ಟಿನಲ್ಲಿ ಎಲ್ಲರೂ ಭಗವಂತನ ಸೇವಕರು. ನಮ್ಮಲ್ಲಿ ಆದರ್ಶ ಸಮಾಜವನ್ನು ಹಂಸವರ್ಣವೆಂದು ಹೇಳಲಾಗಿದೆ. ಹಂಸಕ್ಕೆ ಒಂದೇ ವರ್ಣವಿದೆ. ಆ ವರ್ಣ ಹಂಸವರ್ಣ. ಸಮಾಜವೂ ಹಂಸವರ್ಣದಂತೆ ನಿಷ್ಪಾಪ, ನಿಷ್ಕಲಂಕ, ನಿರ್ಮಲ!

ಇಂದು ಬಂಧುತ್ವ ಬಂಧನ ಸೂಚಕವಾಗಿದೆ. ಬಂಧು ಮತ್ತು ಬಂಧನ ಎರಡೂ ಶಬ್ದ ಒಂದೇ ಧಾತುವಿನಿಂದ ಹುಟ್ಟಿವೆ. ಆದ್ದರಿಂದ ಬಂಧು ಎಂದು ಹೇಳುವುದರಲ್ಲಿ ಅಲ್ಪ ಸ್ವಲ್ಪ ಬಂಧನವಿದೆಯೆಂದು ವೇದಕ್ಕೆ ಅನಿಸುತ್ತದೆ. ಸುಂದ, ಉಪಸುಂದ ಎಂಬಿಬ್ಬರು ಅಣ್ಣತಮ್ಮಂದಿರಿದ್ದರು. ಇಬ್ಬರೂ ಬಲಶಾಲಿಗಳು. ಅವರ ಶಕ್ತಿ ಹೆಚ್ಚುತ್ತಾ ಹೋದಂತೆ ಈಶ್ವರನ ಭಯವೂ ಹೆಚ್ಚುತ್ತಾ ಹೋಯಿತು. ಅವರನ್ನು ಪರಾಜಿತರನ್ನಾಗಿ ಮಾಡಲು ಎಳ್ಳಿನಿಂದ ತಿಲೋತ್ತಮೆ ಎಂಬ ಹೆಸರಿನ ಓರ್ವ ಸುಂದರ ಸ್ತ್ರೀಯನ್ನು ಸೃಷ್ಟಿಸಿ ಅವಳನ್ನು ಆ ಇಬ್ಬರ ಬಳಿ ಕಳುಹಿಸಿದ. ಅವಳನ್ನು ನೋಡಿ ಆ ಅಣ್ಣತಮ್ಮಂದಿರಿಬ್ಬರೂ ಇಂಥ ಸುಂದರ ಸ್ತ್ರೀಗೆ ನಾನೇ ಯೋಗ್ಯ ಎಂದುಕೊಂಡರು. ಇಬ್ಬರೂ ಕದನ ಪ್ರಾರಂಭಿಸಿದರು. ಅವರು ಪಾಂಡವರಂಥ ಅಣ್ಣತಮ್ಮಂದಿರಾಗಿದ್ದರೆ ಯಾವುದಾದರೊಂದು ಉಪಾಯ ಕಂಡುಹಿಡಿಯುತ್ತಿದ್ದರು. ಆದರೆ ಈ ರೀತಿ ಆಗಲಿಲ್ಲ. ಸುಂದನ ಗದೆ ಉಪಸಂದನ ತಲೆ ಮೇಲೆ ಬಿತ್ತು. ಉಪಸುಂದನದು ಸುಂದನ ತಲೆ ಮೇಲೆ ಬಿತ್ತು. ಮುಂದೆ ಒಂದೇ ಕ್ಷಣದಲ್ಲಿ ಇಬ್ಬರೂ ಮಣ್ಣು ಪಾಲಾದರು. ವೇದದಲ್ಲಿ ಇದರ ವರ್ಣನೆ ಇದೆ. ಆದ್ದರಿಂದ ಅಣ್ಣತಮ್ಮಂದಿರ ಮಧ್ಯದಲ್ಲಿಯ ಸ್ಪರ್ಧೆಯನ್ನು ಸ್ಪಷ್ಟ ಮಡುವುದಕ್ಕಾಗಿ ಶತ್ರು ಶಬ್ದದ ಪರ್ಯಾಯವಾಚಕ ಶಬ್ದವನ್ನಾಗಿ ಸಾಪತ್ನವೆಂದು

ಹೇಳಲಾಗಿದೆ. ಸಾಪತ್ನವೇ ಶತ್ರುತ್ವ

ನೀರಿಗಿಂತ ರಕ್ತ ಹೆಚ್ಚು ಗಟ್ಟಿಯೆಂಬ ಗಾದೆ ಮಾತೊಂದು ಇಂಗ್ಲಿಷಿನಲ್ಲಿದೆ. ಅಂದರೆ ರಕ್ತಸಂಬಂಧ ಹೆಚ್ಚು ಗಟ್ಟಿ. ಆದರೆ ರಕ್ತಕ್ಕಿಂತ ನೀರು ಹೆಚ್ಚು ವಿಶುದ್ಧ. ಇದು ನನ್ನ ಅಭಿಪ್ರಾಯ. ನೀರಿನ ಶುದ್ಧತೆ ನೀರಲ್ಲೇ ಇದೆ. ಭ್ರಾತೃಭಾವನೆಯಲ್ಲಿ ಅಣ್ಣತಮ್ಮಂದಿರ ಪ್ರೇಮವಿದೆಯೆಂದು ಹೇಳಿದ ಕೂಡಲೆ ಅಲ್ಲಿ ಅಪಾಯವಿದೆಯೆಂದು ವೇದಕ್ಕೆ ಗೊತ್ತಾಯಿತು. ಆದ್ದರಿಂದ ಯಾರೂ ಜೇಷ್ಠನಾಗಿರುವುದು ಬೇಡ, ಯಾರೂ ಕನಿಷ್ಠನಾಗಿರುವುದೂ ಬೇಡ ಎಂಬುದಾಗಿ ವೇದ ಹೇಳಿತು! ಮೈತ್ರಿಯಲ್ಲಿ ಈ ಅಪಾಯವಿಲ್ಲ. ಋಗ್ವೇದದ ಈ ಮಂತ್ರದಲ್ಲಿ ನನಗೆ ಆತ್ಯಂತಿಕ ಪ್ರೇಮದ ದರ್ಶನವಾಯಿತು. ಮೈತ್ರಿ ಎಂಬ ಶಬ್ದ ನನ್ನನ್ನು ಬಾಲ್ಯದಿಂದಲೂ ಬಂಧುಭಾವ ಎಂಬ ಶಬ್ದಕ್ಕಿಂತ ಹೆಚ್ಚು ಸೆಳೆದಿದೆ. ಏಸು ಕೊನೆಯಲ್ಲಿ ತನ್ನ ಶಿಷ್ಯರಿಗೆ ನೀವೆಲ್ಲ ನನ್ನ ಮಿತ್ರರು: ಶಿಷ್ಯ ಮತ್ತು ಸೇವಕರಲ್ಲ ಎಂದು ಹೇಳಿದ. ಬುದ್ಧನು ತನ್ನ ಶಿಷ್ಯರಿಗೆ ವಿಹಾರಮಾಡಿ ಎಂದು ಹೇಳಿದ. ಅವರಿಗೆ ಮೈತ್ರಿವಿಹಾರಿ ಎಂದು ಹೆಸರು ಕೊಟ್ಟ. ವಿಶ್ವಮೈತ್ರಿಗಾಗಿ ವಿಹಾರಮಾಡಿ ಎಂಬುದು ಇದರ ಅರ್ಥ.

ಮೈತ್ರಿಯಲ್ಲಿ ಹಾರ್ದಿಕ ಏಕತೆ ಮತ್ತು ಪೂರ್ಣ ಪ್ರಮಾಣದ ಪ್ರೇಮದ ಮಾತಿದೆ. ಮೈತ್ರಿಯಲ್ಲಿ ಯಾರೊಬ್ಬರು ಕಡಿಮೆ ಯೊಗ್ಯರು, ಯಾರೊಬ್ಬರು ಹೆಚ್ಚು ಯೋಗ್ಯರು ಎಂಬ ಪ್ರಶ್ನೆಯೇ ಬರುವುದಿಲ್ಲ. ಪ್ರೇಮವು ಗುಣಗಳನ್ನು ಬೆಳೆಸುತ್ತದೆ ಮತ್ತು ದೋಷಗಳನ್ನು ಕ್ಷಮಿಸುತ್ತದೆ.

ವೇದಗಳಲ್ಲಿ ಕೂಡ ಹೀಗೆ ಹೇಳಲಾಗಿದೆ:

ಮಿತ್ರಸ್ಯ ಮಾ ಚಕ್ಷುಷಾ ಸರ್ವಾಣಿಭೂತಾನಿ ಸಮೀಕ್ಷಂತಾಮ್

ಮಿತ್ರಸ್ಯಾಹಂ ಚಕ್ಷುಷಾ ಸರ್ವಾಣಿಭೂತಾನಿ ಸಮೀಕ್ಷೆ (ಯಜು-೩೬.೧೮)

ಸುತ್ತಮುತ್ತಲಿನ ಜಗತ್ತು ನನ್ನತ್ತ ಮೈತ್ರಿ ದೃಷ್ಟಿಯಿಂದ ನೋಡಬೇಕೆಂದು ನಾನು ಬಯಸುವುದಾದರೆ ನಾನು ಕೂಡ ಜಗತ್ತಿನತ್ತ ಮೈತ್ರಿ ದೃಷ್ಟಿಯಿಂದ ನೋಡುವೆ.

(ಮುಂದುವರಿಯುವುದು...)

* * *

ಜನಪದ ಧ್ವನಿ

ಮಾಜಿ ಶಾಸಕರೋರ್ವರ ಆತ್ಮ ನಿವೇದನೆ

ಎರಡು ಬಾರಿ ನಾಗಮಂಗಲ ಕ್ಷೇತ್ರದಿಂದ ಶಾಸಕನಾಗಿ, ರಾಜ್ಯದ ಪ್ರತಿಷ್ಠಿತ ಕರ್ನಾಟಕ ಗೃಹಮಂಡಳಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿ ಸೇವೆ ಸಲ್ಲಿಸಿದ್ದೇನೆ. ಕರ್ನಾಟಕದ ಅಭಿವೃದ್ಧಿಯ ಹರಿಕಾರ ಎಸ್.ಎಂ.ಕೃಷ್ಣರ ಆಡಳಿತದಲ್ಲಿ, ಜಿಲ್ಲೆಯ ಕಾಂಗ್ರೆಸ್ ಸಮಿತಿ ಅಧ್ಯಕ್ಷನಾಗಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ೧೯೯೯ ಹಾಗೂ ೨೦೦೪ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಎರಡು ಬಾರಿ ಸೋಲು ಅನುಭವಿಸಿದ್ದರೂ, ನಾನು ಗಳಿಸಿದ ಜನಬೆಂಬಲದ ಮತ ಗೆದ್ದ ಅಭ್ಯರ್ಥಿ ಗಳಿಸಿದ ಮತಗಳ ಅಂತರದಲ್ಲಿ ಅತಿ ಕಡಿಮೆ ಉಳ್ಳದ್ದು ಎಂಬುದನ್ನು ತಮಗೆ ತಿಳಿಯ ಬಯಸುತ್ತೇನೆ. ಸತತ ಮೂವತ್ತು ವರ್ಷಗಳ ನನ್ನ ರಾಜಕಾರಣದ ಇತಿಹಾಸದಲ್ಲಿ ಜಿಲ್ಲೆಯ ಅಧಿಕಾರ ಹಿಡಿದ ಅನೇಕ ನಾಯಕರಿಗೆ ನನ್ನ ತಾಲ್ಲೂಕಿನ ಜನಬೆಂಬಲವನ್ನು ನಿರಾಯಾಸವಾಗಿ ದೊರಕಿಸಿಕೊಡುತ್ತಾ, ಖ್ಯಾತಿಯ ಉತ್ತುಂಗಕ್ಕೇರಲು ನಾನು ಶ್ರಮಿಸಿದ್ದೇನೆನ್ನುವುದರಲ್ಲಿ ಎರಡು ಮಾತಿಲ್ಲ.

ಕಳೆದ ಚುನಾವಣೆ ಸಂದರ್ಭದಲ್ಲಿ ರಾಜ್ಯಾದ್ಯಂತ ಬಿಜೆಪಿ ಅಲೆ ಇದ್ದರೂ, ನನ್ನ ಕ್ಷೇತ್ರದ ಜನ ಕಾಂಗ್ರೆಸ್ ಪರವಾಗಿ ಮತ ಹಾಕಿ ನನ್ನನ್ನು ಗೆಲ್ಲಿಸಲು ತವಕಿಸಿದ್ದರು. ಆದರೆ ಕಾರಣಾಂತರಗಳಿಂದ ಪಕ್ಷದ ಹೈಕಮಾಂಡ್ ನಿಲುವಿಗೆ, ಪಕ್ಷದ ಹಿರಿಯ ನಾಯಕರ ಮಾತಿನ ಒತ್ತಾಸೆಗೆ ಕಟ್ಟುಬಿದ್ದು ಕಣದಿಂದ ಹಿಂದೆ ಸರಿದೆ. ಅವತ್ತೇ ನನ್ನ ಕ್ಷೇತ್ರದ ಅಭಿಮಾನಿಗಳು ನೀನು ಪಕ್ಷೇತರನಾಗಿಯಾದರೂ ಸ್ಪರ್ಧಿಸಬೇಕೆಂದು ಪ್ರತಿಭಟನಾಪೂರ್ವಕ ಒತ್ತಾಯ ಮಾಡಿದ್ದರು. ನಾನೇನಾದರೂ ಅವರ ಆಗ್ರಹಕ್ಕೆ ಮನ್ನಣೆಯಿತ್ತು ಅವರಿಬ್ಬರ ನಡುವೆ ಸ್ಪರ್ಧಿಸಿದ್ದರೆ ಇವತ್ತು ಯಡಿಯೂರಪ್ಪ ನೇತೃತ್ವದ ಸರ್ಕಾರದಲ್ಲಿ 'ಪವರ್‌ಫುಲ್ ಮಂತ್ರಿಯಾಗಿರುತ್ತಿದ್ದೆ' ಅಲ್ಲವೇ...!

ನಾಗಮಂಗಲದ ಮತದಾರ ಪ್ರಭು ಕೊಟ್ಟ ಸತತ ಸೋಲು ತಾರುಣ್ಯದ ನನ್ನ ಎಲ್ಲ ತಪ್ಪು ಹೆಜ್ಜೆ, ತೀರ್ಮಾನಗಳಿಗೆ ಬ್ರೇಕ್ ಹಾಕುವಂತೆ ಪ್ರೇರೇಪಿಸಿ, ಅನುಭವದ ಮುಖಾಂತರ ಕಲಿತ ಜೀವನ ಪಾಠ ನನ್ನನ್ನು ಪರಿಪೂರ್ಣನನ್ನಾಗಿಸಿದೆ. ಮೂವತ್ತು ವರ್ಷಗಳ ನನ್ನ ಸಕ್ರಿಯ ರಾಜಕಾರಣದಲ್ಲಿ ಅನೇಕ ಏಳು ಬೀಳು ಪೆಟ್ಟುಗಳನ್ನು ಅನುಭವಿಸಿದ್ದರೂ ತಮ್ಮೊಂದಿಗಿನ ಒಡನಾಟ, ಸಭೆ ಸಮಾರಂಭಗಳಲ್ಲಿ ಪಾಲ್ಗೊಳ್ಳುವಿಕೆ, ಜನಸೇವೆಯಲ್ಲಿ ನಿರಂತರ ತೊಡಗಿಸಿಕೊಳ್ಳುವ ಹುಮ್ಮಸ್ಸು, ನನ್ನಲ್ಲಿ ನವಚೈತನ್ಯವನ್ನುಂಟುಮಾಡಿದೆ. ನಿಮ್ಮ ಕಷ್ಟ ಸುಖಗಳಲ್ಲಿ ಹೀಗೆ ಭಾಗಿಯಾಗುತ್ತಾ ನಿಮ್ಮೊಳಗೊಬ್ಬನಾಗಿ ಮನ್ನಡೆವ ಬಯಕೆ ನನ್ನದು. ನಾನು ಅಧಿಕಾರ ವಂಚಿತನಾಗಿ ಹತ್ತು ವರ್ಷಗಳೇ ಕಳೆದುಹೋದರೂ ಸಮುದಾಯದ ಒಳಗಿಗಾಗಿ, ಜನಸೇವೆಗೆ ನಾನೀಗಲೂ, ಯಾವಾಗಲೂ ಕಟಿಬದ್ಧನಾಗಿದ್ದೇನೆ. ನಿಮ್ಮದೊಂದು ಕರೆಗೆ ಓಗೊಟ್ಟು ನಿಮ್ಮ ಸೇವೆಗೆ ಸದಾಸಿದ್ಧನಿರುತ್ತೇನೆಂಬ ಅಚಲ ವಿಶ್ವಾಸವನ್ನು ಈ ಮೂಲಕ ಪ್ರಕಟಿಸುತ್ತಾ, ನಿಮ್ಮೆಲ್ಲರ ಸಲಹೆ, ಸಹಕಾರ, ಉಭಯ ಕುಶಲೋಪರಿಗಳು ಹೀಗೆ ನಿರಂತರವಾಗಿರಲೆಂದು ಆಶಿಸಿ, ನನ್ನ ಮಾತು ಮುಗಿಸುತ್ತೇನೆ. ಇಂತಿ,

– ಎಲ್.ಆರ್.ಶಿವರಾಮೇಗೌಡ, ಮಾಜಿ ಶಾಸಕ

ಜನಪದ ಧ್ವನಿ

ಪ್ರಜ್ಞಾವಂತ ರಾಷ್ಟ್ರಕನ ಅನಿಸಿಕೆ

ಕಾಂಗ್ರೆಸ್ ಆಗಲಿ, ಜೆ.ಡಿ.ಎಸ್ ಆಗಲಿ, ಬಿ.ಜೆ.ಪಿ. ಆಗಲಿ, ಈಗಿನ ಪರಸ್ಪರ ಕಲಹಗಳಲ್ಲಿ, ಮೇಲೆದ್ದು ಅಂತರ್ಯದಿಂದಲೇ ಬರುವುದು ಸಾಧ್ಯವಿಲ್ಲ. ಉಳಿದ ಪಕ್ಷಗಳಲ್ಲೆವೂ ನೂರರಲ್ಲಿ ಇಪ್ಪತ್ತೈದರಷ್ಟೆ ಅಲ್ಪಮತವಷ್ಟೆ. ಈ ಅಲ್ಪಮತವೂ ಸನ್ಮತವಂತೂ ಅಲ್ಲವೇ ಅಲ್ಲ. ಹೀಗೆ ಸಜ್ಜನರಲ್ಲದ ಮತವ್ಯವಸ್ಥಾಪಕರ ನೀತಿಯೇ ರಾಷ್ಟ್ರನಾಶಕವಾಗಿದೆ ಎನ್ನಲು ಅಡ್ಡಿಯೇನಿಲ್ಲ. ಪಕ್ಷರಾಜಕೀಯ ಸರಿಯಾಗಿಲ್ಲ. ಇದು ವ್ಯಕ್ತಿ ಪೂಜೆಯಲ್ಲೂ, ಆಸ್ತಿ ಪಾಸ್ತಿ ಸಂಪಾದನೆಯಲ್ಲೂ, ಇದಕ್ಕಾಗಿ ಕೊಲೆ ದರೋಡೆಗಳಲ್ಲೂ, ಜೂಜು ಮದ್ಯ ಮಾಂಸಗಳಲ್ಲೂ, ಆರ್ಥಿಕವಾಗಿ ಪೂರ್ಣ ಪ್ರಜಾವಂಚನೆಯಲ್ಲೂ ನಿರತವಾಗಿರುವ ಗುಂಪುಗಳ ರಾಜಕೀಯವು ನಗೆಪಾಟಲಾಗಿರುವುದು ಮಾತ್ರವಲ್ಲ; ರಾಷ್ಟ್ರದ್ರೋಹದ ಪರಮಾವಧಿಯಾಗಿದೆ. ಈ ಪರಿಸರದಲ್ಲಿ 'ರಾಷ್ಟ್ರಸೇವೆ', 'ಪ್ರಜಾಸೇವೆ' ಎಂಬ ಅಧಿಕಾರ ನಿಷ್ಠರ, ಅಧಿಕಾರ ವಂಚಿತರ ಯಾವ ಘೋಷಣೆಯೂ ಅಂತರ್ಯದಿಂದ ಬರುವ ಸಂಭವವೇ ಇಲ್ಲ. ರಾಷ್ಟ್ರನಾಯಕ ವಿಶ್ವನಾಯಕ ಸಕಲಜಗನ್ನಾಯಕ ಆ ಪರಮಾತ್ಮನೊಬ್ಬನೇ. ಅವನು ಸಂಕಲ್ಪಿಸಿದರೆ ಮಾತ್ರ ರಾಷ್ಟ್ರಧರ್ಮ ಉಳಿದೀತು. ಅವನ ಸಂಕಲ್ಪವನ್ನು ಅರಿತೋ ಅರಿಯದೆಯೋ ರಾಷ್ಟ್ರಧರ್ಮದ ಮೂಲ ಸೂತ್ರಗಳನ್ನು ಅನುಸರಿಸಿ, ಚಾಣಕ್ಯನಂತೆಯೂ ಶ್ರೀಕೃಷ್ಣನಂತೆಯೂ **'ದರ್ಮಕ್ಷೇತ್ರೇ ಮತಿಃ ಮಮ'** ಎಂಬ ರಾಷ್ಟ್ರಧಾರಣರೂಪವಾದ ಸದ್‌ಧರ್ಮದಲ್ಲಿ ನಿಷ್ಠರಾಗಿ, ಬುದ್ಧಿವಂತಿಕೆಯಿಂದ ನಿಯಮಬದ್ಧವಾಗಿ ಕೆಲಸಮಾಡುವುದೆಲ್ಲವೂ ರಾಷ್ಟ್ರಸೇವೆಯೇ ಆಗುತ್ತದೆ. ಪ್ರಜೆಗಳ ಹಿತವಾಗುತ್ತದೆ. ವಿಶ್ವಯೋಗಕ್ಷೇಮಕ್ಕೆ ಕಾರಣವಾಗುತ್ತದೆ.

ಸರ್ವೋದಯದ ಸರ್ವನಾಶ ಮಾಡಿದ ಕೇಂದ್ರ ಸರ್ಕಾರ ಪ್ರಭುತ್ವದವರಿಂದ ಆಗಿ ಹೋದ ರಾಷ್ಟ್ರನಾಶಕ ಕಾರ್ಯಗಳಿಗೂ, ಆಗುತ್ತಿರುವ ಅಂತಹ ಕಾರ್ಯಗಳಿಗೂ, ತಡೆ ಒಡ್ಡುವ ಅಥವಾ ಸರಿ ದಾರಿಯಲ್ಲಿ ಸಾಗುವ ಸಾಮರ್ಥ್ಯ ಇದ್ದರೆ, ಸಹಾಯಕರೂ ಇದ್ದರೆ, ನೀವೂ ರಾಷ್ಟ್ರ ಸೇವೆ ಮಾಡಿ. ಯಥಾಶಕ್ತಿ ಮಾಡಿದರೂ ಸಾಕು. 'ನಿಮ್ಮ ಸೇವೆಗೆ ಸದಾಸಿದ್ಧ' ಎಂಬ ನಿಮ್ಮ ಮಾತು ವೈಯಕ್ತಿಕವಾಗಿ ನಮಗೆ ಒಪ್ಪದು. "ಸ್ವಯಂ ದಾಸಾಃ" ಎಂಬ ವಿಶ್ವಾಮಿತ್ರನ ಮಾತು ಬಾಲ್ಯದಿಂದ ನನ್ನ ಹೃದಯದಲ್ಲಿ ಅಚ್ಚಾಗಿದೆ. ತಮ್ಮ ಪತ್ರದಲ್ಲಿರುವ ಪ್ರಬುದ್ಧತೆ ಪೂರ್ಣತೆಗಳು ಜೀವನದಲ್ಲಿ ಯಾರಿಗೂ ಎಂದೂ ಬರುವುದಿಲ್ಲ. ನೀವು ಅಧಿಕಾರದಲ್ಲಿದ್ದಾಗ ಮಾಡಿರುವ ಒಳ್ಳೆಯ ಕೆಲಸಗಳು ನಿಮ್ಮ ಪಾಲಿಗೆ ಪುಣ್ಯ, ಅದು ನಿಮ್ಮನ್ನು ಕಾಪಾಡುತ್ತದೆ. ಮೇಲೇರಿಸಿ ಕೆಳಗೆ ಬೀಳದಂತೆ ನೋಡಿಕೊಳ್ಳುತ್ತವೆ. ನೀವು ನಿಮ್ಮ ಖಚಿತವಾದ ಒಳ್ಳೆಯ ದಾರಿಯಲ್ಲಿ ಸಾಗಿ. ದೇವರ ಗುರುಹಿರಿಯರ ಸಜ್ಜನರ ಆರ್ಶೀವಾದ ಬಲವಿರಲಿ.

ಇಂತು,

– **ಅರಯರ್ ಶ್ರೀರಾಮ ಶರ್ಮಾ**

ಮೇಲುಕೋಟೆ

* * *

ಗಾಂಧೀ ದೃಷ್ಟಿಕೋನ

ಅಗಸ್ಟ್ ೧೯೧೮ರ ಮಾತು. ಗುಜರಾತಿನ ನಡಿಯಾಡ್‌ನಲ್ಲಿ ಹಿಂದು ಸ್ತ್ರೀ ಮಂಡಲವೆಂಬ ಸಂಸ್ಥೆ ಇತ್ತು. ಅದರ ಕಾರ್ಯದರ್ಶಿನಿ ರಸಿಕಮಣಿ ಕಸ್ತೂರ ಬಾ ಗಾಂಧೀಯವರಿಗೆ ತಮ್ಮ ಸಂಸ್ಥೆಯ ವಾರ್ಷಿಕ ಸಮಾರಂಭ ಮತ್ತು ದಾದಾಭಾಯಿ ನವರೋಜಿಯವರ ಜನ್ಮ ದಿನೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಬೇಕೆಂದು ಆಹ್ವಾನ ಪತ್ರ ಬರೆದರು. ಅದಕ್ಕೆ ಉತ್ತರವಾಗಿ ಗಾಂಧೀಜಿ ಹೀಗೆ ಬರೆದರು:

ನಾವಿಬ್ಬರೂ ಸ್ವತಂತ್ರರು ಮತ್ತು ಸಮಾನ ಹಕ್ಕುಗಳನ್ನು ಹೊಂದಿದ್ದೇವೆ. ನಮ್ಮ ಮದುವೆಯ ಕಾಲದಲ್ಲಿ ನನ್ನ ಹೆಂಡತಿ ಸಂಪೂರ್ಣವಾಗಿ ನಿರಕ್ಷರಸ್ಥಳಾಗಿದ್ದಳು. ಬಹಳ ಪ್ರಯತ್ನದ ಬಳಿಕ ಅವಳಿಗೆ ಸ್ವಲ್ಪ ಶಿಕ್ಷಣ ಕೊಟ್ಟೆ. ಅನೇಕ ಕಾರಣಗಳಿಂದಾಗಿ ಆ ಕೆಲಸವನ್ನು ನನ್ನ ತೃಪ್ತಿಗನುಗುಣವಾಗಿ ಮಾಡಲಾಗಲಿಲ್ಲ. ಆದ್ದರಿಂದ ನಿಮ್ಮ ಆಮಂತ್ರಣವನ್ನು ಸ್ವೀಕರಿಸಲು ಅವಳಿಗೆ ಸಾಧ್ಯವಿಲ್ಲ. ನನ್ನ ಹೆಂಡತಿ ಅಧ್ಯಕ್ಷ ಭಾಷಣ ಓದಬಲ್ಲಳೆಂದೂ ನನಗನ್ನಿಸುವುದಿಲ್ಲ. ತನ್ನ ಭಾಷಣವನ್ನು ಅವಳು ಸ್ವತಃ ಖಂಡಿತವಾಗಿಯೂ ಸಿದ್ಧ ಪಡಿಸಲಾರಳು. ನಿಮ್ಮ ಚಟುವಟಿಕೆಗಳ ಬಗ್ಗೆ ಅವಳಿಗೆ ಪರಿಚಯ ಇಲ್ಲ. ಭಾಷಣವನ್ನೂ ಮಾಡಲಾರಳು. ಆದ್ದರಿಂದ ನಮ್ಮಿಬ್ಬರನ್ನೂ ಕ್ಷಮಿಸಬೇಕೆಂದು ವಿನಂತಿಸುತ್ತೇನೆ. ಮೋಹನದಾಸನ ವಂದೇಮಾತರಂ.

ನೇರ ನೋಟ

ಇತ್ತೀಚಿಗೆ ಬೆಂಗಳೂರಿನಲ್ಲಿ ಮಿಲಿಟರಿ ಟ್ರಕ್ ಒಂದು ಸೈಕಲ್ ಸವಾರ ಬಾಲಕನೊಬ್ಬನ ಮೇಲೆ ಹರಿದು, ಬಾಲಕ ತಕ್ಷಣ ಸ್ಥಳದಲ್ಲೇ ಸಾವನ್ನಪ್ಪಿದ. ಈ ಘಟನೆ ನಡೆದದ್ದು ಒಂದು ಸಮೂಹದ ಪ್ರಾರ್ಥನಾ ಮಂದಿರದ ಬಳಿ. ಬಾಲಕನ ದುರ್ಮರಣವನ್ನು ತಿಳಿದ ಆ ಮಂದಿರದಲ್ಲಿಯ ಭಕ್ತರೆಲ್ಲರೂ ಹೊರೆಗೆ ಓಡಿ ಬಂದರು. ಟ್ರಕ್‌ನಲ್ಲಿದ್ದ ಸೇನಾ ನೌಕರರನ್ನು ಹಿಡಿದು ಹಿಗ್ಗಾಮುಗ್ಗಾ ಥಳಿಸಿದರು. ರಸ್ತೆಯಲ್ಲಿ ದೊಡ್ಡ ದೊಂಬಿಯೇ ಆಯಿತು. ಪೋಲೀಸರು ಲಾಠಿ ಚಾರ್ಜ್ ಮಾಡಿದರು. ಗುಂಡು ಹಾರಿಸಿದರು. ಇತ್ಯಾದಿ ಘಟನೆಗಳು ನಡೆದವು. ಘಟನೆಗೆ ಕಾರಣವಾದ ಮಂದಿ ಸ್ವಲ್ಪ ಹೊತ್ತಿನ ಮುಂಚೆ ಪ್ರಾರ್ಥನೆಯಲ್ಲಿ ತೊಡಗಿದ್ದರು! ಇದೇ ಜನ ಹೊರಬಂದು ಹಿಂಸಾಚಾರದಲ್ಲಿ ತೊಡಗಿದರು. ಅಂದರೆ ಪ್ರಾರ್ಥನೆ ಎಷ್ಟು ತೆಳುವಾಗಿತ್ತೆಂಬುದನ್ನೂ, ಆಧ್ಯಾತ್ಮಿಕ ವಿಚಾರಗಳು ಎಷ್ಟು ಶಕ್ತಿಹೀನವಾಗಿದ್ದವೆಂಬುದನ್ನೂ ಈ ಘಟನೆ ತೋರಿಸುತ್ತದೆ. ದೇವರ ಮೇಲಿನ ನಮ್ಮ ಭಕ್ತಿ, ಆಧ್ಯಾತ್ಮಿಕ ವಿಚಾರಗಳು ಎಷ್ಟು ಗಟ್ಟಿಯಿವೆ, ಎಷ್ಟು ಪೊಳ್ಳು ಇವೆ ಎಂಬುದನ್ನು ಪರೀಕ್ಷಿಸಲು ಇಂಥ ಘಟನೆಗಳನ್ನು ದೇವರೇ ಸ್ವತಃ ಪ್ರಾರ್ಥನಾ ಮಂದಿರಗಳ ಬಳಿ ಸಂಭವಿಸುವಂತೆ ಮಾಡುತ್ತಾನೆಯೋ ಏನೋ!

* * *

ಜನಪದ ವ್ಯಕ್ತಿ

ಮಾಲತಿ ಸುಧೀರ್

ರಂಗ ಭೂಮಿಯ ಮೇಲೆ ಅನೇಕ ಮಹಿಳೆಯರು ತಮ್ಮ ಕಲಾ ಪ್ರತಿಭೆಯನ್ನು ಮೆರೆದು ಹೋಗಿದ್ದಾರೆ. ಈಗಲೂ ಅನೇಕ ಹವ್ಯಾಸಿ ನಾಟಕ ರಂಗ ಭೂಮಿಯಲ್ಲಿ ಭಾಗವಹಿಸುತ್ತಿರುವ ಮಹಿಳಾಕಲಾವಿದರ ಸಂಖ್ಯೆಯೇನೂ ಕಡಿಮೆಯಾಗಿಲ್ಲ. ಕಲಾಕ್ಷೇತ್ರದಲ್ಲಿ ಭಾಗವಹಿಸುವುದು ಸುಲಭ. ತಾವು ಭಾಗವಹಿಸುವ ಕಲಾಕ್ಷೇತ್ರದ ಬೆಳವಣಿಗೆಗಾಗಿ ಸ್ವತಃ ಕರ್ಣಧಾರರಾಗುವುದು ಕಠಿಣ. ಈ ಸಾಹಸ ಮಾಡುವಂಥ ರಂಗಭೂಮಿ ಮಹಿಳಾ ಕಲಾವಿದರು ಬಹಳ ಅಪರೂಪವೆಂದೇ ಹೇಳಬೇಕು. ದೂರದರ್ಶನದ ಅತಿರೇಕದ ಈ ಕಾಲದಲ್ಲಂತೂ ಒಂದು ನಾಟಕ ಕಂಪನಿಯ ಒಡೆಯಳಾಗಿ ಕೆಲಸ ಮಾಡುವುದು ತುಂಬ ಅಪರೂಪ. ಕನ್ನಡ ರಂಗಭೂಮಿಯ ಕ್ಷಿತಿಜದಲ್ಲಿ ಹೊಳೆಯುತ್ತಿರುವ ತಾರೆ ಮಾಲತಿ ಸುಧೀರ್. ಮಧ್ಯವಯಸ್ಸಿನ ಮಾಲತಿ ತಮ್ಮ ನಾಟಕ ಕಲಾವಿದ ಪತಿ ಸುಧೀರ್ ನಿಧನರಾದ ಮೇಲೆ ಧೈರ್ಯಕಳೆದುಕೊಳ್ಳದೆ ತಮ್ಮ ಪತಿಯು ಪ್ರಾರಂಭಿಸಿದ "ಕರ್ನಾಟಕ ಕಲಾವೈಭವ ಸಂಘ"ವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈಗಾಗಲೆ ಈ ಕಂಪನಿಗೆ ಹನ್ನೆರಡು ವರ್ಷಗಳಾಗಿವೆ. ರಂಗಭೂಮಿ ಕ್ಷೇತ್ರದಲ್ಲಿ ಒಂಟಿಯಾಗಿ ಬಾಳುವುದು ಕಷ್ಟ, ಒಗ್ಗಟ್ಟಿನಲ್ಲಿಯೇ ಬಲವಿದೆ ಎಂದು ತಿಳಿದ ಮಾಲತಿಯವರು ತಮ್ಮ ವೃತ್ತಿ ಜೀವನಕ್ಕೆ ಬಲ ಬರುವಂತೆ ಮಾಡಲು ಈಗ ಕರ್ನಾಟಕದಲ್ಲಿರುವ ಇಪ್ಪತ್ತು ನಾಟಕ ಕಂಪನಿಗಳನ್ನೊಳಗೊಂಡ ಸಂಘವನ್ನು ಸ್ಥಾಪಿಸಿದ್ದಾರೆ ತಾವೇ ಈ ಸಂಘದ ಕಾರ್ಯದರ್ಶಿನಿಯಾಗಿಯೂ ಕೆಲಸ ಮಾಡುತ್ತಿದ್ದಾರೆ. ಈ ಸಂಘಕ್ಕೆ ನಾಡಿನ ಹಿರಿಯ ರಂಗ ಕಲಾವಿದರಾದ ಹಿರಣಯ್ಯನವರು ಅಧ್ಯಕ್ಷರು ಮತ್ತು ಗುಡಗೇರಿ ಬಸವರಾಜುರವರು ಉಪಾಧ್ಯಕ್ಷರು. ತಮ್ಮ ನಾಟಕ ಕಂಪನಿಯ ಗುರುತರವಾದ ಜವಾಬ್ದಾರಿಯೊಂದಿಗೆ ಈ ಸಂಘದ ಕೆಲಸವನ್ನೂ ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಒಂದುಸಾವಿರದಷ್ಟಿರುವ ಕಲಾವಿದರಿಗೆ ಸರ್ಕಾರದಿಂದ ಸೌಲಭ್ಯಗಳನ್ನು ದೊರಕಿಸಿ ಕೊಡಲು ಮಾಲತಿಯವರು ಹೆಣಗುತ್ತಿದ್ದಾರೆ. ಇದು ಕಲಾವಿದರ ಬಗ್ಗೆ ಇರುವ ಅವರ ಕಳಕಳಿಯನ್ನು ತೋರಿಸುತ್ತದೆ. ತಾವು ಬೆಳೆಯುವುದರೊಂದಿಗೆ ತಮ್ಮ ಸಹ ಕಲಾವಿದರೂ ಬೆಳೆಯ ಬೇಕೆಂಬುದು ಮಾಲತಿಯವರ ಮಹತ್ವಕಾಂಕ್ಷೆ. ಅವರ ಕಂಪನಿಯು ಇದುವರೆಗೆ ನಲವತ್ತೈದು ನಾಟಕಗಳನ್ನು ಪ್ರದರ್ಶಿಸಿದೆ, ಕೆಲವು ನಾಟಕಗಳತೂ ನೂರರಿಂದ ನೂರೈವತ್ತು ಪ್ರದರ್ಶನ ಕಂಡಿವೆ. ತಮ್ಮ ನಾಟಕ ಪ್ರದರ್ಶನಕ್ಕೆ ಆಗಾಗ್ಗೆ ಸಿನಿಮಾ ರಂಗದ ನಟರನ್ನು ಅತಿಥಿಗಳನ್ನಾಗಿ ಬರಮಾಡಿಕೊಳ್ಳುತ್ತಾರೆ. ಬೆಂಗಳೂರಿನ ಗಾಂಧೀನಗರದಲ್ಲಿರುವ ಗುಬ್ಬಿ ವೀರಣ್ಣ ರಂಗಮಂದಿರವು ಕೆ.ಬಿ.ಆರ್.ಡ್ರಾಮಾ ಕಂಪನಿಯ ಹಿಡಿತದಲ್ಲಿ ಸಿಕ್ಕಿ ಕೊಡು ಮೂರು ವರ್ಷಗಳೇ ಆದವು ಈ ಹಿಡಿತವನ್ನು ತಪ್ಪಿಸಿ ಆ ರಂಗಮಂದಿರದಲ್ಲಿ ಬೇರೆ ನಾಟಕ ಕಂಪನಿಗಳ ನಾಟಕಗಳೂ ಪ್ರದರ್ಶನವಾಗಬೇಕೆಂಬುದು ಮಾಲತಿಯವರ ಕೂಗು.

ಸಾಭಾರ: – ಸಂದೀಪನಾಯಕ ಮತ್ತು ಪ್ರಜಾವಾಣಿ

ಜನಪದ ಸೇವಾ ಟ್ರಸ್ಟ್ ಸಮಾಚಾರ

ಸಾಮಾನ್ಯವಾಗಿ ಪ್ರತಿ ಎರಡು ತಿಂಗಳಿಗೊಮ್ಮೆ ನಡೆಯುವ ಟ್ರಸ್ಟಿನ ಕಾರ್ಯಕಾರಿಣಿ ಸಭೆ ನಡೆಯಿತು. ಈ ಸಭೆಯಲ್ಲಿ ಎಂದಿನಂತೆ ಲೆಕ್ಕ ಪತ್ರಗಳ ಪರಿಶೀಲನೆಯೊಂದಿಗೆ ಖಾದಿ ಉದ್ಯಮಕ್ಕೆ ಸಂಬಂಧಿಸಿದಂತೆ ಕೆಲವು ಮಹತ್ವದ ತೀರ್ಮಾನ ಕೈಗೊಳ್ಳಲಾಯಿತು. ಈಗ ಈ ಉದ್ಯೋಗದಲ್ಲಿ ತೊಡಗಿರುವ ಕುಶಲಕರ್ಮಿಗಳಿಗೆ ಇಂದಿನ ಕಾಲ ಪರಿಸ್ಥಿತಿಗಳಿಗನುಗುಣವಾಗಿ ಕೂಲಿ ದೊರೆಯುತ್ತಿಲ್ಲ. ಆದ್ದರಿಂದ ಅವರಿಗೆ ಸಮರ್ಪಕವಾದ ಕೂಲಿ ಮತ್ತು ಕೆಲವು ಭದ್ರತೆ ದೊರೆಯಬೇಕೆಂದು ಟ್ರಸ್ಟಿನ ಖಜಾಂಚಿ ಶ್ರೀ ಪ್ರಭಾಕರ್ ಸೂಚಿಸಿದ್ದನ್ನು ಸಭೆಯು ಅನುಮೋದಿಸಿತು.

ಶ್ರೀ ರಾಮನವಮಿ ಪ್ರಯುಕ್ತ ಹೊಸ ಜೀವನ ದಾರಿ ಕೇಂದ್ರದಲ್ಲಿರುವ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲಾಯಿತು ಮತ್ತು ಅಲ್ಲಿದ್ದವರಿಗೆಲ್ಲ ಪ್ರಸಾದ ವಿನಿಯೋಗ ಮಾಡಲಾಯಿತು. ವೈರಮುಡಿ ಜಾತ್ರಾ ಸಂದರ್ಭದಲ್ಲಿ ಗ್ರಾಮಕ್ಕೆ ಬಂದ ಭಕ್ತಾದಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಸಹಸ್ರಾರು ಜನ ಇದರ ಪ್ರಯೋಜನ ಪಡೆದರು. ಟ್ರಸ್ಟಿನ ಅಭಿಮಾನಿಯಾಗಿದ್ದ ಮತ್ತು ಹಲವಾರು ರೀತಿಯಲ್ಲಿ ಸಹಾಯ ಮಾಡಿದ್ದ ಕೆ.ಎಂ.ನಾಗರಾಜರಾವ್ ಅವರು ದೈವಾಧೀನರಾದರು. ಅವರ ನಿಧನಕ್ಕಾಗಿ ಟ್ರಸ್ಟ್ ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ ಮತ್ತು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ. ಟ್ರಸ್ಟಿನ ಅಭಿಮಾನಿ ಮಿತ್ರರಾದ ಕೋಲಾರದ ಶ್ರೀ ಬಿಸಪ್ಪಗೌಡರು ಟ್ರಸ್ಟಿಗೆ ಭೇಟಿಕೊಟ್ಟರು ಮತ್ತು ತಮ್ಮೊಂದಿಗೆ ಅನೇಕ ಸಹೋದ್ಯೋಗಿ ವಕೀಲರನ್ನು ಕರೆದುಕೊಂಡು ಬಂದು ಟ್ರಸ್ಟಿನ ಪರಿಚಯ ಮಾಡಿಕೊಟ್ಟರು. ಮೈಸೂರಿನಲ್ಲಿ ಹೊಳೆನರಸೀಪುರ ಖಾದಿ ಸಂಘದವರು ನಡೆಸುತ್ತಿರುವ ಖಾದಿ ವಸ್ತ್ರಾಲಯದಲ್ಲಿ ಬೇಸಿಗೆ ಪ್ರಯುಕ್ತ ವಿಶೇಷ ಮಾರಾಟದ ಪ್ರಚಾರ ಕಾರ್ಯಕ್ರಮವನ್ನು ಟ್ರಸ್ಟಿನ ಅಧ್ಯಕ್ಷರು ಉದ್ಘಾಟಿಸಿದರು. ಸಾಹಿತಿ ಮತ್ತು ಚಿಂತಕ ರೆಹಮತ್ ತರೀಕರೆಯವರು ಟ್ರಸ್ಟಿನಲ್ಲಿ ಒಂದು ರಾತ್ರಿ ಕಳೆದರು.

ಟ್ರಸ್ಟಿನ ಅಭಿಮಾನಿ ಮಿತ್ರರ ಗಮನಕ್ಕೆ

ಇದೇ ಶೈಕ್ಷಣಿಕ ವರ್ಷದಿಂದ ಟ್ರಸ್ಟಿನ ವಿದ್ಯಾರ್ಥಿನಿಲಯ ಕರುಣಾಗೃಹಕ್ಕೆ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ೬ ವರ್ಷದಿಂದ ೧೨ ವರ್ಷದ ಒಳಗಿನ ಗಂಡು ಮಕ್ಕಳನ್ನು ಸೇರಿಸಿಕೊಳ್ಳಲಾಗುವುದು. ಅರ್ಹ ಮಕ್ಕಳು ನಿಮಗೆ ಗೊತ್ತಿದ್ದರೆ ಅವರನ್ನು ಸೇರಿಸಬಹುದು.

೨೦೦೯ ಮಾರ್ಚ್ ಮಾಹೆಯ ದಾನಿಗಳು

ಶ್ರೀ ಕೆ.ಎನ್.ಸಿ.ಸ್ವಾಮಿ, ಶ್ರೀಮತಿ ಸುಶೀಲಾ ಸೋಸಲೇಗೌಡ,
ಶ್ರೀ ಸುಧೀಂದ್ರಕುಮಾರ್, ಶ್ರೀ ಎಂ.ಮುನಿರಾಜು, ಶ್ರೀ ಸಿ.ಪಿ.ಭಗವಾನ್,
ಶ್ರೀಮತಿ ಜೋತ್ಸ್ನಾ ಕೆ.ಕಾಮತ್– ಬೆಂಗಳೂರು; ಶ್ರೀಮತಿ ಇಂದುಮತಿ–ಚೆನ್ನೈ;
ಶ್ರೀಮತಿ ಎಸ್.ಬಿ.ದಿವಾಣಜಿ–ಗುಲ್ಬರ್ಗ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ
ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೬೬

- ಸುರೇಂದ್ರ ಕೌಲಗಿ



೧೯೬೦ ರಲ್ಲಿ ಜನಪದ ಸೇವಾ ಟ್ರಸ್ಟ್ ಪ್ರಾರಂಭವಾದಾಗ ಲೆಕ್ಕದಲ್ಲಿ ಇದ್ದದ್ದು ಕೇವಲ ೨೦೦ ರೂಪಾಯಿ. ಆ ವರ್ಷದ ಆಡಿಟ್ ಆದ ಲೆಕ್ಕ ಇನ್ನೂ ಫೈಲ್‌ನಲ್ಲಿ ಭದ್ರವಾಗಿದೆ. ಹಣದ ಮಾತಂತಿರಲಿ, ಕೆಲಸಗಾರರ ಸಂಖ್ಯೆ ಕೂಡ ಕೇವಲ ಎರಡು. ಅದು ಗಿರಿಜಾ ಮತ್ತು ಸುರೇಂದ್ರ. ಹಿಗಾಗಿ ಟ್ರಸ್ಟಿನ ಯಾವುದೇ ಕೆಲಸವಾಗಲಿ, ಕಾರ್ಯಕ್ರಮವಾಗಲಿ, ಅದನ್ನು ನಿಭಾಯಿಸುತ್ತಿದ್ದುದ್ದು ಈ ಇಬ್ಬರೇ. ನಾಟಕದಲ್ಲಿ ಒಬ್ಬ ವ್ಯಕ್ತಿಯೇ ವಿವಿಧ ಪಾತ್ರಗಳನ್ನು ವೇದಿಕೆಯ ಮೇಲೆ ಬೇರೆ-ಬೇರೆ ಸ್ಥಳಗಳಲ್ಲಿ ನಿಂತು ತನ್ನ ಪಾತ್ರವನ್ನು ನಿರ್ವಹಿಸುವಂತೆಯೇ ಆಗಿತ್ತು ಆ ಇಬ್ಬರು ಕಾರ್ಯಕರ್ತರ ಸ್ಥಿತಿ. ಸಂಸ್ಥೆಯನ್ನು ಪ್ರಾರಂಭಿಸಿದ ಮೇಲೆ ಲೆಕ್ಕ ಇಡುವುದು, ಪತ್ರ ವ್ಯವಹಾರ ಮಾಡುವುದು, ಅಂಚೆ ಕಛೇರಿಗೆ ಹೋಗುವುದು, ಭೇಟಿ ಕೊಡುವ ಅತಿಥಿಗಳಿಗೆ ಸತ್ಕಾರ ಮಾಡುವುದು, ಇತ್ಯಾದಿ ನುರಾರು ಬಗೆಯ ಕೆಲಸಗಳನ್ನು ನಿರ್ವಹಿಸಬೇಕಿತ್ತು. ಕ್ಯಾಷ್‌ಬುಕ್ ಬರೆಯುವುದು ಹೇಗೆ ಎಂಬುದನ್ನು ಸಹ ತಿಳಿದುಕೊಳ್ಳಬೇಕಿತ್ತು. ಊಟೋಪಚಾರದ ಕೆಲಸವನ್ನೇನೂ ಗಿರಿಜಮ್ಮನವರಿಗೆ ಹೇಳಿಕೊಡ ಬೇಕಾಗಿರಲಿಲ್ಲ. ಅದು ಅವರ ಸ್ವಭಾವ ಸಿದ್ಧವಾಗಿ ಕರಗತವಾದ ಕಲೆಯಾಗಿತ್ತು. ಲೆಕ್ಕ ಬರೆಯುವ ವಿಷಯದಲ್ಲಿ ಆಗ ಟ್ರಸ್ಟಿನ ಸ್ನೇಹಿತರಾಗಿದ್ದ ಪಾಂಡವಪುರ ಕೈಗಾರಿಕಾ ಸಹಕಾರ ಸಂಘದ ಕಾರ್ಯದರ್ಶಿ ಶ್ರೀ ರಾಮಾಚಾರ್ ಮೇಲುಕೋಟೆಗೆ ಬಂದು ಒಂದು ದಿನ ಪೂರ್ತ ಇದ್ದು ಲೆಕ್ಕ ಪತ್ರ ಬರೆಯುವುದು ಹೇಗೆ, ಯಾವ ಯಾವ ಸ್ಟೇಷನರಿ ಬೇಕು ಇತ್ಯಾದಿ ಎಲ್ಲವನ್ನೂ ಹೇಳಿ ಅದುವರೆಗಿನ ಲೆಕ್ಕವನ್ನೂ ಬರೆದು ತೋರಿಸಿದರು. ಆಮೇಲಿಂದ ನಾವೇ ನಾವೇ ಲೆಕ್ಕ ಬರೆದಿಡಲು ಪ್ರಾರಂಭಿಸಿದೆವು. ಮುಂದೆ ಬಂದ ಕೆಲ ಸಹ-ಕಾರ್ಯಕರ್ತರಿಗೆ ಕಲಿಸಿ ಸಂಸ್ಥೆಯ ಲೆಕ್ಕ ಪತ್ರವನ್ನು ವ್ಯವಸ್ಥಿತವಾಗಿ ಇಡುವ ಕ್ರಮ ಪ್ರಾರಂಭವಾಯಿತು. ಈಗಲೂ ಆ ವ್ಯವಸ್ಥೇ ಉಳಿದು ಕೊಂಡು ಬಂದಿದೆ. ಪ್ರತಿವರ್ಷ ತಪ್ಪದೇ ಟ್ರಸ್ಟಿನ ಲೆಕ್ಕಪತ್ರ ಆಡಿಟ್ ಆಗಿ ಬರುತ್ತಿದೆ. ಈ ಎಲ್ಲ ನಲ್ವತ್ತೈದು ವರ್ಷಗಳ ದಾಖಲೆಗಳು ಇನ್ನೂ ಇವೆ. ಲೆಕ್ಕ ಪತ್ರ ಇಡುವುದರಲ್ಲಿ ಮಾರ್ಗದರ್ಶನ ಮಾಡಿದವರಲ್ಲಿ ಟ್ರಸ್ಟಿನ ಪ್ರಥಮ ಆಡಿಟರ್‌ರವರಾದ ಮೈಸೂರಿನ ಶ್ರೀ ಎಂ.ಎಸ್.ನಾರಾಯಣಸ್ವಾಮಿ ರಾವ್‌ರವರು. ಇವರು ಅನೇಕ ವರ್ಷಗಳವರೆಗೆ ಟ್ರಸ್ಟಿನ ಲೆಕ್ಕ ಆಡಿಟ್ ಮಾಡಿದರು. ಅವರು ತೀರಿಕೊಂಡ ಮೇಲೆ ಮೈಸೂರಿನಲ್ಲಿಯ ಚಾರ್ಟೆಡ್ ಅಕೌಂಟೆಂಟ್ ಶ್ರೀ ಅನಂತವರ್ಧನರವರು ಆಡಿಟ್ ಮಾಡುತ್ತಿದ್ದಾರೆ.

ಅಲ್ಲದೆ ಲೆಕ್ಕ ಪತ್ರವನ್ನು ಹೇಗೆ ಹೆಚ್ಚು-ಹೆಚ್ಚು ಪಾರದರ್ಶಕವಾಗಿ ಇಡಬೇಕೆಂಬುದರ ಬಗ್ಗೆ ಮಾರ್ಗದರ್ಶನ ಕೊಡುತ್ತಿರುತ್ತಾರೆ. ಟ್ರಸ್ಟ್ ಪ್ರಾರಂಭವಾದಾಗ ಅದರ ಕಛೇ-ರಿಯೂ ಸರಳವಾಗಿ, ಸಾಮಾನ್ಯವಾಗಿ ಇತ್ತು. ಈಗಲೂ ಹಾಗೆಯೇ ಇದೆ. ಒಂದು ವ್ಯತ್ಯಾಸವೇನೆಂದರೆ ಆಗ ಜನಪದ ನಿಲಯದ ಮುಂಭಾಗದ ರೂಂನಲ್ಲಿ ಒಂದು ಚಾಪೆ ಹಾಸಿಕೊಂಡು, ಒಂದು ಪುಟ್ಟ ಕಬ್ಬಿಣದ ಟ್ರಂಕ್ ಮೇಲೆ ಪುಸ್ತಕಗಳನ್ನು ಇಟ್ಟು ಲೆಕ್ಕ ಬರೆಯಲಾಗುತ್ತಿತ್ತು. ಪತ್ರ ವ್ಯವಹಾರವನ್ನೂ ಮಾಡಲಾಗುತ್ತಿತ್ತು. ಹೆಚ್ಚುವರಿ ಕಾಗದ ಪತ್ರಗಳನ್ನು ಗೋಡೆಯಲ್ಲಿ ಕೂಡಿಸಲಾಗಿದ್ದ ಮರದ ಕಪಾಟಿನಲ್ಲಿ ಇಡಲಾಗುತ್ತಿತ್ತು. ಈಗ ಅವುಗಳ ಬದಲಾಗಿ ಕುರ್ಚಿ, ಟೇಬಲ್ ಮತ್ತು ಒಂದೆರಡು ಬೀರುಗಳು ಬಂದಿವೆ. ಬಂದ ಅತಿಥಿಗಳು ಚಾಪೆಯ ಮೇಲೆ ಕುಳಿತುಕೊಳ್ಳುತ್ತಿದ್ದರು. ಊಟಕ್ಕೆ ಮಾತ್ರ ನಿಲಯದ ಇನ್ನೊಂದು ಸಣ್ಣ ರೂಂನಲ್ಲಿ ಕೂಡುತ್ತಿದ್ದರು. ಆ ರೂಂನಲ್ಲಿ ಹೆಚ್ಚು ಬೆಳಕು ಇರಲಿಲ್ಲ. ನೆಲದ ಮೇಲೆ ಹಾಕಿದ್ದ ಗಾರೆ ಕಿತ್ತು ಹೋಗಿ ಅನೇಕ ಸಣ್ಣ-ಸಣ್ಣ ಗುಂಡಿಗಳಾಗಿದ್ದವು. ಅಲ್ಲಿಯೇ ಹುಲ್ಲಿನ ಬಿಡಿ-ಬಿಡಿ ಒಂಟಿ ಚಾಪೆಗಳ ಮೇಲೆ ಕೂತು ಊಟ ಮಾಡುತ್ತಿದ್ದರು. ೧೯೬೩ ರಲ್ಲಿ ಅಂಗವಿಕಲ ಮಕ್ಕಳಿಗಾಗಿ ಕರುಣಾಗೃಹವನ್ನು ಪ್ರಾರಂಭಿಸಿದ ಮೇಲಂತೂ ಟ್ರಸ್ಟಿಗೆ ಭೇಟಿ ಕೊಡುವವರ ಸಂಖ್ಯೆ ಹೆಚ್ಚಾಯಿತು. ಅವರಲ್ಲಿ ಅನೇಕ ಗಣ್ಯ ಮಹನೀಯರೂ ಇರುತ್ತಿದ್ದರು. ಅವರು ಸಹ ಈ ಚಿಕ್ಕ ರೂಮಿನಲ್ಲಿಯೇ ಕುಳಿತು ಉಪಹಾರ ಸ್ವಿಕರಿಸಿದರು, ಊಟ ಮಾಡಿದರು. ಇಂಥ ಗಣ್ಯ ವ್ಯಕ್ತಿಗಳಲ್ಲಿ ಪ್ರಮುಖರು ಜಯಪ್ರಕಾಶ ನಾರಾಯಣರು, ಎಸ್.ಎಲ್.ಭೈರಪ್ಪ ದಂಪತಿಗಳು ಮತ್ತು ಟ್ರಸ್ಟಿನ ಹಿರಿಯ ಅಣ್ಣನಂತಿದ್ದ ಬಿ.ಆರ್.ಪ್ರಾಣೇಶ್‌ರಾವ್ ಮುಂತಾದ ಇನ್ನೂ ಅನೇಕ ಮಹನೀಯರು ಮತ್ತು ಸ್ನೇಹಿತರು. ಈಗ ಅದು ತಪ್ಪಿ ಸಾಲಾಗಿ ಕುಳಿತುಕೊಂಡು ಊಟ ಮಾಡಬಹುದಾದ ಸಾಮಾನ್ಯ ಗುಣಮಟ್ಟದ ಟೇಬಲ್‌ಗಳು ಬಂದಿವೆ. ಅಲ್ಲದೆ ನಿಲಯದ ಹಿತ್ತಲಲ್ಲಿ ಇರುವ ಕಲ್ಲಿನ ಡೈನಿಂಗ್ ಟೇಬಲ್ ಕೂಡ ಹಚ್ಚು ಉಪಯೋಗಕ್ಕೆ ಬರುತ್ತದೆ. ಮನೆಯ ಎಲ್ಲ ಕೆಲಸವನ್ನು ಅಂದರೆ ಅಡಿಗೆ ಮಾಡುವುದು, ಕಸಗುಡಿಸುವುದು, ಪಾತ್ರೆತೊಳೆಯುವುದು ಮುಂತಾದ ಎಲ್ಲ ಕೆಲಸಗಳನ್ನು ಆ ಇಬ್ಬರು ಕಾರ್ಯಕರ್ತರೇ ಮಾಡಬೇಕಾಗಿತ್ತು. ಈ ಎಲ್ಲ ಕೆಲಸವನ್ನು ಮಾಡುವಾಗ ಕಿಂಚಿತ್ತೂ ಬೇಸರ ಇರಲಿಲ್ಲ. ಕಾರಣ, ಬಂದ ಅತಿಥಿಗಳು ಮತ್ತು ಸ್ನೇಹಿತರು ತೋರಿಸುತ್ತಿದ್ದ ಪ್ರೀತಿ ಹಾಗೂ ಟ್ರಸ್ಟಿಗಾಗಿ ಮಾಡುತ್ತಿದ್ದ ನೆರವು. ಸಂಸ್ಥೆಯನ್ನು ಕಟ್ಟಬೇಕು, ಬೆಳಸಬೇಕು, ಹೆಚ್ಚಿನ ಸಾಮಾಜಿಕ ಕಾರ್ಯ ಮಾಡಬೇಕು ಎಂಬ ಇಚ್ಛೆ ಇದ್ದುದರಿಂದ ಈ ಎಲ್ಲ ಕೆಲಸವನ್ನು ಮಾಡುವುದರಲ್ಲಿಯೂ, ಯಾವುದೇ ಪ್ರಕಾರದ ಕೆಲಸವನ್ನು ಮಾಡುವುದರಲ್ಲಿಯೂ ಬೇಸರ ಇದ್ದಿಲ್ಲ.

ಕರುಣಾಗೃಹ ಪ್ರಾರಂಭವಾದಾಗ ಅಡಿಗೆಯವರೆಂದು ಯಾರೂ ಇರಲಿಲ್ಲ. ಇದಕ್ಕೆ ಕಾರಣ ಟ್ರಸ್ಟಿನಲ್ಲಿ ಹೆಚ್ಚಿನ ಹಣ ಇರಲಿಲ್ಲ. ಆದ್ದರಿಂದ ಕರುಣಾಗೃಹದ ಹಳೆಮನೆಯ ಕಿರು ಅಡಿಗೆ ಮನೆಯಲ್ಲಿಯೇ ಗಿರಿಜಮ್ಮನವರು ಮಕ್ಕಳಿಗೆ ಅಡಿಗೆ ಮಾಡುತ್ತಿದ್ದರು ಮತ್ತು ನಾವು ಬೇರೆಯವರು ಊಟ ಬಡಿಸುತ್ತಿದ್ದೆವು. ಆಗ ಕರುಣಾಗೃಹಕ್ಕೆ ಸೇರಿಕೊಂಡಿದ್ದ ಅಂಗವಿಕಲ ಮಕ್ಕಳಲ್ಲಿ ಹೆಚ್ಚಿನವರು ಗ್ರಾಮಾಂತರ ಪ್ರದೇಶದವರಾಗಿದ್ದರಿಂದ ಮತ್ತು ತಮ್ಮ ಮನೆಗಳಲ್ಲಿ ಯಥಾಶಕ್ತಿ ಶ್ರಮದ ಕೆಲಸ

ಮಾಡಿದ ಅನುಭವ ಮತ್ತು ಅಭಿರುಚಿ ಇದ್ದುದರಿಂದ ಅವರು ಕರುಣಾಗೃಹದ ಅನೇಕ ಕೆಲಸಗಳಲ್ಲಿ ನೆರವಾಗುತ್ತಿದ್ದರು. ಅಕ್ಕಿ ಸ್ವಚ್ಛ ಮಾಡುವುದು, ಒಲೆ ಉರಿಹಾಕುವುದು, ಪಾತ್ರೆ ತೊಳೆಯುವುದ, ನೆಲಸಾರಿಸುವುದು, ಸಾಯಂಕಾಲವಾದ ಮೇಲೆ ಲಾಟೀನ್‌ಗಳಿಗೆ ಸೀಮೆಯೆಣ್ಣೆ ಹಾಕಿ, ಗಾಜು ಒರೆಸಿ ದೀಪ ಹಚ್ಚುವುದು ಇತ್ಯಾದಿ. ಅಡಿಗೆ ಮನೆಗೆ ಒಂದೇ ಒಂದು ಸಣ್ಣ ಕಿಟಕಿ ಇತ್ತು. ಹೊಗೆ ಹೋಗಲು ಸರಿಯಾದ ದಾರಿ ಇರಲಿಲ್ಲ. ನಾಡು ಹೆಂಚಿನ ಮನೆಯಾದ್ದರಿಂದ ಹೆಂಚುಗಳ ಸಂದಿಯಿಂದ ಹೊಗೆ ಹೋಗಬೇಕಾಗಿತ್ತು. ಇನ್ನೊಂದು ವಿಚಿತ್ರವಾದ ಸನ್ನಿವೇಶವೆಂದರೆ, ಕರುಣಾಗೃಹದ ಹಿತ್ತಲಲ್ಲಿ ನೆಲ ಬಾವಿಯಿತ್ತು. ಅದಕ್ಕೆ ರಾಟೆಯಿರಲಿಲ್ಲ. ಆದ್ದರಿಂದ ನೀರೆಳೆಯುವುದಕ್ಕಾಗಿ ಅಕ್ಕ ಪಕ್ಕ ಎರಡು ಕಡೆ ಕವೆ ಕೋಲುಗಳನ್ನು ನೆಟ್ಟು ಅವುಗಳ ಮೇಲೆ ಅಡ್ಡಲಾಗಿ ಒಂದು ಗಟ್ಟಿ ಕೋಲು ಇಟ್ಟು ಅದರ ಮೇಲೆ ಹಗ್ಗ ಹಾಕಿ ನೀರೆಳೆಯುತ್ತಿದ್ದೆವು! ಅದು ತಂಬಾ ಕಷ್ಟದ ಕೆಲಸವಾಗಿತ್ತು. ಮುಂದೊಂದು ದಿನ ಒಂದು ರಾಟೆ ತಂದು ಹಾಕಿದಾಗ ಬಹುದೊಡ್ಡ ಸುಧಾರಣೆಯುಂಟಾಗಿ ಎಲ್ಲರಿಗೂ ಖುಷಿಯೋ ಖುಷಿ. ಈಗ ಅದೇ ಬಾವಿಗೆ ವಿದ್ಯುತ್ ಪಂಪ್ ಅಳವಡಿಸಲಾಗಿದೆ. ಆಗ 'ವಾರ್ಡನ್' ಎಂದು ಯಾರೂ ಇರಲಿಲ್ಲ. ಅಡಿಗೆಯವರೂ ನಾವೇ, ವಾರ್ಡನ್‌ನ್ನೂ ನಾವೇ, ಮಕ್ಕಳಿಗೆ ಅಧ್ಯಾಪಕರೂ ನಾವೇ, ಮುಂದೆ ಟ್ರಸ್ಟಿನ ಆರ್ಥಿಕ ಸ್ಥಿತಿ ಸ್ವಲ್ಪ ಸುಧಾರಣೆಗೊಂಡ ಮೇಲೆ ಮೇಲುಕೋಟೆಯ ಒಬ್ಬ ಯುವಕ ನರಸಿಂಹಶೆಟ್ಟಿ ಎಂಬುವವರನ್ನು ಅಡಿಗೆ ಕೆಲಸಕ್ಕೆ ಗೊತ್ತು ಮಾಡಲಾಯಿತು. ಅವರು ಇನ್ನೂ ಮೇಲುಕೋಟೆಯಲ್ಲಿ ಇದ್ದಾರೆ. ಟ್ರಸ್ಟಿನ ಪ್ರಾರಂಭದ ದಿನಗಳಲ್ಲಿ ಮಾಡಿದ ವಿವಿಧ ಬಗೆಯ ಕೆಲಸಗಳ ಅನುಭವ ಈಗ ಐವತ್ತು ವರ್ಷಗಳ ನಂತರವೂ ಕಾಪಾಡಿಕೊಂಡು ಬರುತ್ತಿದೆ.

(ಮುಂದುವರೆಯುವುದು...)

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ. ಶ್ರೀಮತಿ ರಂಗಮಣಿ ಜನಾರ್ಧನ್; ಶ್ರೀಮತಿ ಚೆಂಪೂಬಾಯಿ ಸೆಟ್ಲೂರು– ಬೆಂಗಳೂರು: ಶ್ರೀಮತಿ ಮೀರಾ ಕೊಪ್ಪೀಕರ– ಮುಧೋಳ; ಖಾದಿ ಗ್ರಾಮೋದ್ಯೋಗ ಸಹಕಾರ ಸಂಘ– ಹೊಳೆನರಸೀಪುರ ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ ಶ್ರೀ ವೈ.ಜಿ.ಮುರಳೀಧರನ್; ಶ್ರೀ ಶಬೀರ್ ಖಾನ್; ಶ್ರೀ ಜಿ.ಬಾಲಕೃಷ್ಣ– ಬೆಂಗಳೂರು; ಶ್ರೀ ಎಂ.ಎಸ್.ಸತೀಶ್; ಶ್ರೀ ವಿ.ರಾಜು– ಮೈಸೂರು; ಶ್ರೀ ಎನ್.ಶ್ರೀನಿವಾಸಗೌಡ; ಶ್ರೀ ಟಿ.ಜಿ.ಭೈರೇಗೌಡ; ಶ್ರೀ ಸಿ.ಕೋದಂಡಪ್ಪ–ಕೋಲಾರ; ಶ್ರೀ ಬಿ.ಆರ್.ದೇಶಪಾಂಡೆ– ಜಮಖಂಡಿ ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯು ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ–ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820



MELKOTE
8.6.09

ಶ್ರೀಮತಿ/ ಶ್ರೀ ...

83> Dr. V. A. Dihanji 84
Plot No - 3
Bennur Nagar
Bijapur Road,
Sollapur - 413004

Left
Return
to sender

TO

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at Sanketh, Mudrana, Melkote. Phone : 08236 – 299998 e-mail : janapada@yahoo.com web : janapada.net